ದೇವರ ನಾಮಕ್ಕೆ ಸ್ತೋತ್ರ

# “ನಿನ್ನ ಹಾಗೆ ಯಾರು ಇಲ್ಲ”

ಲೇಖಕರು:

**ಪಾಸ್ಟರ್. ಸಹೋದರಿ. ಪಿ.ತೇಜಸ್ಸ್**

ದೇವರ ನಾಮಕ್ಕೆ ಸ್ತೋತ್ರ

# "ನಿನ್ನ ಹಾಗೆ ಯಾರು ಇಲ್ಲ"


ಮೊದಲನೆಯ ಮುದ್ರಿಕೆ : 2018
ಪ್ರತಿಗಳು : 5000
ಪುಟಗಳು : 40

ಮುದ್ರಕರು : ರವಿಶಂಕರ್, ಬೆಂಗಳೂರು


ಓದಿರುವಿರಾ :-

1. ನಂಬಿಕೆಯ ರಹಸ್ಯ
2. ಅದ್ಭುತ ಸಾಕ್ಷಿ
3. ಪ್ರೀತಿಯ ಯಶಸ್ಸು
4. ಕಣ್ಣೀರಿನ ಕೂಗು
5. ನಾನು ನನ್ನ ಸರ್ವಸ್ವ
6. ಯಾವುದು ಬೇಕು?
7. ಜ್ಞಾನ ಸ್ತೋತ್ರದ ಯಜ್ಞಗಳು
8. ಪ್ರಾರ್ಥನೆಯ ನಿಧಿಯು ನಿನ್ನದೇ


ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಫೋನ್: 9900241593, 9880245222

“ದೇವರೇ, ನಾವು ನಿನ್ನ ಆಲಯದಲ್ಲಿ ನಿನ್ನ ಪ್ರೀತಿಯನ್ನು ಸ್ಮರಿಸುತ್ತೇವೆ; ದೇವರೇ ನಿನ್ನ ನಾಮದ ಘನತೆಗೆ ತಕ್ಕಂತೆಯೇ ಲೋಕವೆಲ್ಲಾ ನಿನ್ನನ್ನು ಹೊಗಳುವದು ” (ಕೀರ್ತ ೪೮:೧೦)

## ಅರ್ಪಣೆ

“ಕರ್ತನೇ ನಿನ್ನ ಪ್ರೀತಿಯನ್ನು ಕಲಿಸುತ್ತಾ ಯಾವಾಗಲೂ ನಿನ್ನನ್ನು ಸ್ಮರಿಸುವಂತೆ ಆಲಯದಲ್ಲಿ ನನ್ನನ್ನು ನಿನ್ನ ಘನತೆಗಾಗಿ ಉಪಯೋಗಿಸುತ್ತಾ ಇದುವರೆಗೂ ನಡೆಸಿಕೊಂಡು ಬರುತ್ತಿರುವುದಕ್ಕಾಗಿ ಸ್ತೋತ್ರ

ನನ್ನ ತಂದೆಗೆ “ನಿನ್ನ ಹಾಗೆ ಯಾರೂ ಇಲ್ಲ” ಎನ್ನುವ ಈ ಪುಸ್ತಕವನ್ನು ಕೃತಜ್ಞತೆಯಿಂದ ಸಲ್ಲಿಸುತ್ತಿದ್ದೇನೆ.

# ಪರಿಚಯ

**"**ಯಾವನ ಮೇಲೆ ದಯೆಯಿಡುವೆನೋ ಅವನ ಮೇಲೆ ದಯೆಯಿಡುವೆನು; ಯಾರನ್ನು ಕರುಣಿಸುವೆನೋ ಅವರನ್ನು ಕರುಣಿಸುವೆನು ಅಂದನು**"** (ವಿಮೋಚನಕಾಂಡ 33:19)

ಪ್ರೀತಿಯ ದೇವರ ಮಕ್ಕಳೇ ಅನೇಕ ಆತ್ಮೀಕ ಪುಸ್ತಕಗಳಿಂದ ಕರ್ತನು ನಿಮ್ಮ ಹೃದಯದ ಹತ್ತಿರಕ್ಕೆ ಬರುತ್ತಿದ್ದಾನೆ. ಒಂದೊಂದು ಪುಸ್ತಕಗಳನ್ನು ನೀವು ಓದುವಾಗ ಅನೇಕ ಕಾರ್ಯಗಳನ್ನು ತಿಳಿದು ಕೊಳ್ಳುತ್ತಿದ್ದೀರಾ! ಅದೇ ರೀತಿ ನಿಮ್ಮ ಜೀವನಕ್ಕೆ ನಿಮ್ಮ ಹೃದಯಕ್ಕೆ ತಾಕಿದ ಮಾತುಗಳನ್ನು ಅಳವಡಿಸಿಕೊಂಡು ಕ್ರಿಸ್ತನ ಪ್ರೀತಿಯಲ್ಲಿ ಬೆಳೆಯುತ್ತಿದ್ದೀರಾ ಎಂದು ನಾನು ವಿಶ್ವಾಸಿಸುತ್ತೇನೆ. ಆದುದರಿಂದ ಮತ್ತೊಂದು ನೂತನ ಪುಸ್ತಕವು ನಿಮ್ಮ ಕೈ ಸೇರಿದೆ. ಈ ಪುಸ್ತಕವು ನಿನ್ನನ್ನು ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗಿ ಮಾಡುತ್ತದೆ. ನಂಬಿಕೆಯಿಂದ ಓದಿರಿ.

ನೀನು ಆತನ ಹಾಗೆ ಬದಲಾಗಿ ಆತನ ಕಾರ್ಯವನ್ನು ಸಿದ್ಧಿಗೆ ತರಬೇಕು. ನೀನು ಆತನ ಹಾಗೆ ದೇವರು ಒಬ್ಬನೂ ಇಲ್ಲ ಎಂದು ಈ ಲೋಕದ ಎಲ್ಲಾ ಜನರಿಗೆ ಸುವಾರ್ತೆಯನ್ನು ಸಾರುವಾಗ **'**ಸತ್ಯ**'**ವು ಒಬ್ಬೊಬ್ಬರ ಹೃದಯಗಳನ್ನು ಮುಟ್ಟುತ್ತದೆ. ಆಗ ಅವರ ಜೀವನದಲ್ಲಿಯೂ ಅದ್ಭುತಗಳು ನಡೆದು ಬರುತ್ತದೆ. ಆಗ ಎಲ್ಲರ ಬಾಯಲ್ಲಿ ಒಂದು ಶಬ್ದ ಪ್ರತಿಧ್ವನಿಸುತ್ತದೆ ಈ ವ್ಯಕ್ತಿ ಯಾರು **'**ಈತನ ಹಾಗೆ ಯಾರು ಇಲ್ಲವಲ್ಲ**'** ಎಂದು. ಯಾಕೆಂದರೆ ಸತ್ಯವನ್ನು ತಿಳಿಸುವವರೂ ಸಿಕ್ಕುವುದು ಈ ಲೋಕದಲ್ಲಿ ಬಹಳ ಕಷ್ಟ. ನೀನು ಸತ್ಯವನ್ನು ತಿಳಿಸುವ ವ್ಯಕ್ತಿಯಾಗಬೇಕು. ಯೇಸು ಕ್ರಿಸ್ತನ ಮಾತುಗಳನ್ನು ಹೇಳುವ ನಿನ್ನನ್ನು ನೋಡುವ ಜನರು 'ನಿನ್ನ ಹಾಗೆ ಯಾರು ಇಲ್ಲ**'** ಎಂದು ಹೇಳುವುದಾದರೆ ನಮ್ಮ ಕರ್ತನ ಹಾಗೆ ಈ ಲೋಕದಲ್ಲಿ ಯಾರು ಇಲ್ಲವೇ ಇಲ್ಲ ಎಂದು ಸುಲಭವಾಗಿ ಅರ್ಥವಾಗುತ್ತದೆ ಅಲ್ಲವೇ.

ನೀನು ಹೇಳುವುದು ಸತ್ಯ, ನೀನು ಹೇಳಿದ ಹಾಗೆ ನಾನು ಕೇಳುತ್ತೇನೆ, ಎಂದು ನಿನ್ನನ್ನು ನೋಡುವವರು ಹೇಳುವ ಹಾಗೆ ನೀನು ಜೀವಿಸಬೇಕು. ಆಗ ನಿನ್ನನ್ನೂ ಕರ್ತನನ್ನೂ ನಂಬುವ ಮನಸ್ಸನ್ನು ನನ್ನ ಕರ್ತನು ನಿನ್ನ ಮುಖಾಂತರ ಎಲ್ಲರಿಗೂ ಕೊಡಲು ಸಿದ್ಧವಾಗುತ್ತಾನೆ.

ಪ್ರಿತಿಯ ದೇವರ ಮಗುವೇ, ನಿನ್ನ ಪ್ರಸಿದ್ಧಿಯು ಕರ್ತನ ನಾಮವನ್ನು ಸದಾ ಮಹಿಮೆ ಪಡಿಸುತ್ತದೆ. ಇದನ್ನೇ ಕರ್ತನು ನಿನ್ನಿಂದ ಎದುರು ನೋಡುತ್ತಿದ್ದಾನೆ.

ಒಂದು ವೇಳೆ ಈಗ ನಿನ್ನ ಜೀವನ ಕುಗ್ಗಿಹೋಗಿ ಯಾವುದರಲ್ಲೂ ಜಯ ಸಿಗದೇ, ಎಲ್ಲರನ್ನು ನಂಬಿ ಮೋಸಹೋಗಿ, ಅನೇಕರು ನಿನ್ನಿಂದ ದೂರವಾಗಿರಬಹುದು. ಹಾಗಾದರೇ ನೋಡು ನಿನಗೆ ಇದೇ ಒಳ್ಳೆಯ ಸಮಯ, ನೀನು ಈ ಪುಸ್ತಕವನ್ನು ಆಸಕ್ತಿಯಿಂದ ಓದು, ಆಗ ನಿನಗೆ ತಿಳಿಯದ ಬದಲಾವಣೆ, ನಿನಗೆ ತಿಳಿಯದ ಆದರಣೆಯನ್ನು ಕರ್ತನು ನಿನ್ನಲ್ಲಿ ಉಂಟುಮಾಡುತ್ತಾನೆ. ನೀನು ಮಾಡಬೇಕಾದ ಸಾಧನೆಗೆ ಕರ್ತನು ನಿನಗೆ ಈ ಪುಸ್ತಕದ ಮುಖಾಂತರ ಸ್ಪೂರ್ತಿ ಕೊಡುತ್ತಾನೆ.

ಎಲ್ಲರ ಬಾಯಲ್ಲಿ ನೀನು ಛೀ. . . .ತೂ. . . .ಎಂದು ಅವಮಾನ ಪಡಿಸಿಕೊಂಡು ಬದುಕೇ ಸಾಕು ಎಂದು ನೀನು ಜೀವಿಸುತ್ತಿರಬಹುದು. ಆದರೆ ಈ ಲೋಕದಲ್ಲಿ ನಿನ್ನನ್ನು ಕರ್ತನು ಒಂದು ಬೆಳಕನ್ನಾಗಿ ಎಬ್ಬಿಸಲು ನಿನಗೆ ಒಳ್ಳೇ ಪದವಿ ಕೊಡಲು ಬಯಸುತ್ತಿದ್ದಾನೆ. ನಿನ್ನನ್ನು ನೋಡುವವರೆಲ್ಲರೂ ಇನ್ನು ಮುಂದೆ "ನಿನ್ನ ಹಾಗೆ ಯಾರು ಇಲ್ಲ" ಎಂದು ಹೇಳುತ್ತಾರೆ. ನಿನ್ನ ಮನಸ್ಸನ್ನು ಬದಲಾಯಿಸಿಕೋ, ಸೋತು ಹೋಗಿರುವ ನಿನ್ನ ಜೀವನವನ್ನು ರೂಪಿಸುವುದಕ್ಕೆ ಕರ್ತನು ನಿನ್ನ ಹೃದಯದ ಬಾಗಿಲನ್ನು ತಟ್ಟುತ್ತಿದ್ದಾನೆ.

ಇನ್ನು ಮುಂದೆ ನೀನು ಸುಮ್ಮನೇ ಕುಳಿತುಕೊಳ್ಳುವ ವ್ಯಕ್ತಿಯಾಗಿ ಇರುವುದಿಲ್ಲ ಕ್ಷಣ-ಕ್ಷಣದಲ್ಲೂ ಕರ್ತನಿಗಾಗಿ ನಾನು ಏನಾದರೂ ಮಾಡಬೇಕು, "ನನ್ನ ಯೇಸುಕ್ರಿಸ್ತನ ಹಾಗೆ ಯಾರು ಇಲ್ಲ" ಆತನು ಮಾಡಿರುವ ಕಾರ್ಯಗಳ ಹಾಗೆ ಯಾರೂ ಇದುವರೆಗೂ ಮಾಡಲಿಲ್ಲ, ಎಂದು ನಿನಗೆ ಸಂಪೂರ್ಣವಾಗಿ ಅರ್ಥವಾಗುತ್ತದೆ. ಕರ್ತನಿನಾಗಿ ನಿಂತು ಪ್ರಕಾಶಿಸುವ ಮನಸ್ಸು ನಿನಗೆ ಬರುತ್ತದೆ.

ನಿನ್ನ ಬಾಯಿಂದ ಬರುವ ಆತನ ಮಾತುಗಳನ್ನು ಗಮನಿಸುವ ಜನರು ಹೇಳುತ್ತಾರೆ. "ನಿನ್ನ ಹಾಗೆ ಯಾರು ಇಲ್ಲ" ಎಂದು. ಕರ್ತನು ನಿನಗಾಗಿ ಇಟ್ಟಿರುವ ಒಳ್ಳೇ ಪದವಿಯನ್ನು ನೀನು ಹೊಂದಿಕೊಳ್ಳಲು ಸಿದ್ಧವಾಗು. ಕರ್ತನು ಈ ಪುಸ್ತಕದ ಮುಖಾಂತರ ನಿನ್ನನ್ನು ಮೇಲಕ್ಕೆ ತಂದು ಖಂಡಿತವಾಗಿ ನಿನ್ನನ್ನು ಆಶೀರ್ವದಿಸಲಿ.

**ಲೇಖಕರು : ಪಾಸ್ಟರ್. ಸಹೋದರಿ. ಪಿ.ತೇಜಸ್ಸ್**

**ಪೀಠಿಕೆ**

1. ಕ್ರಿಸ್ತನ ಅನ್ಯೋನ್ಯತೆ
2. ಪೇತ್ರನ ಅನ್ಯೋನ್ಯತೆ
3. ವಾಕ್ಯದಲ್ಲಿ ಜಯ
4. ಕಲಿತುಕೋ
5. ಅಧೀನವಾಗು
6. ಐಕ್ಯತೆಯಿಂದಿರು

# 1. ಕ್ರಿಸ್ತನ ಅನ್ಯೋನ್ಯತೆ

"ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ. ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ." (ಯೋಹಾನ 17:21,22)

ಪ್ರೀತಿಯ ದೇವರ ಮಗುವೇ ಯೋಹಾನ 17ನೇ ಅಧ್ಯಾಯದಲ್ಲಿ ಕರ್ತನಾದ ಯೇಸುಕ್ರಿಸ್ತನು ತಂದೆಯೊಟ್ಟಿಗೆ ತನ್ನ ಹೊಂದಾಣಿಕೆ ಯಾವ ರೀತಿಯಲ್ಲಿದೆ ಎಂದು ಮಾತನಾಡುತ್ತಿದ್ದಾನೆ. ತಾನು ಈ ಲೋಕದಲ್ಲಿ ಏನೇ ಅದ್ಭುತ ಕಾರ್ಯಗಳನ್ನೂ, ಸೂಚಕ ಕಾರ್ಯಗಳನ್ನೂ, ಮಾಡಿದರೂ ಪವಿತ್ರಾತ್ಮ ಭರಿತನಾಗಿ ತಂದೆಯೊಟ್ಟಿಗೆ ಒಂದಾಗಿ ಮಾಡಿದ್ದಾನೆ. ಪ್ರತಿ ದಿನವೂ ಪ್ರಾರ್ಥನೆಯನ್ನು ಮಾಡುತ್ತಾ ಅನೇಕ ರಾತ್ರಿಗಳು ತಂದೆಯೊಟ್ಟಿಗೆ ಪ್ರಾರ್ಥನೆಯಲ್ಲಿ ಕಳೆದು, ತಂದೆಯೊಟ್ಟಿಗೆ ಒಂದಾಗಿ, ತಂದೆಯಿಂದ ಹೊಂದಿದ ಮಹಿಮೆಯ ಪ್ರಕಾರ ಸತ್ತವರನ್ನು ಎಬ್ಬಿಸುತ್ತಾ, ಕುಷ್ಠಹತ್ತಿದವರನ್ನು ಶುದ್ಧಮಾಡುತ್ತಾ, ಪಾರ್ಶ್ವವಾಯುರೋಗಿಗಳನ್ನು ಗುಣ ಪಡಿಸುತ್ತಾ, ಕುರುಡರಿಗೆ ಕಣ್ಣು ಕೊಡುತ್ತಾ, ಮೂಕರಿಗೆ ಮಾತು ಬರುವಂತೆ, ಕುಂಟರು ನಡೆಯುವಂತೆ, ಅನೇಕಾನೇಕ ಸ್ವಸ್ಥತೆಯನ್ನು ಮಾಡಿದನು. ಮತ್ತು ಬಿರುಗಾಳಿಯನ್ನು ಅಡಗಿಸಿ ದೋಣಿಯು ಮುಳುಗದಂತೆ ಬಿರುಗಾಳಿಗೆ ಆಜ್ಞಾಪಿದನು, ಸಮುದ್ರವು ಆತನ ಮಾತು ಕೇಳಿತು, ಸಮುದ್ರದ ಮೇಲೆ ನಡೆದನು. ಧೈರ್ಯವಾಗಿ ಉಪದೇಶ ಮಾಡಿದನು, ಇಂತಹ ಅದ್ಭುತಗಳನ್ನೂ ಸೂಚಕ ಕಾರ್ಯಗಳನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನು ಮಾಡಲು ತಂದೆಯಿಂದಲೇ ಮಹಿಮೆಯನ್ನು ಹೊಂದಿಕೊಂಡನು ಎಂದು ಆತನು ತನ್ನ ಮಾತಿನಲ್ಲಿ ಹೇಳುತ್ತಿದ್ದಾನೆ.

ತಂದೆಯೊಂದಿಗೆ ಅನ್ಯೋನ್ಯವಾಗಿದ್ದಂತಹ ನಮ್ಮ ಪ್ರಿಯ ರಕ್ಷಕನಾದ ಯೇಸುಕ್ರಿಸ್ತನು ಅತೀ ಘೋರವಾದ ಶಿಲುಬೆಯ ಮರಣವನ್ನು ಲೋಕ ಪಾಪ ಪರಿಹಾರಕ್ಕೋಸ್ಕರ ತಾಳಿದನು. ಆತನ ಶರೀರದಲ್ಲಿ ಒಂದು ತೊಟ್ಟು ರಕ್ತವು ಸಹ ಉಳಿಯದೆ ಈ ಭೂಮಿಯ ಮೇಲೆ ಆತನ ಪರಿಶುದ್ಧ ಜೀವವುಳ್ಳ ರಕ್ತ ಚೆಲ್ಲಲ್ಪಟ್ಟಿತು. ಈ ಪ್ರಪಂಚದ ಚರಿತ್ರೆಯಲ್ಲಿಯೇ 'ಆತನ ಹಾಗೆ ಯಾರೂ ಇಲ್ಲ' ಒಬ್ಬರೂ ಇಲ್ಲ. ಒಬ್ಬರೂ ಈ ರೀತಿ ಘೋರ ಮರಣವನ್ನು ಹೊಂದಲಿಲ್ಲ.

ಹಾಗಿದ್ದಲ್ಲಿ ಯೇಸುಕ್ರಿಸ್ತನ ಮಾದರಿಯನ್ನು ನೀನು ಅನುಸರಿಸು. ಯಾಕೆಂದರೆ ನಮ್ಮ ಪ್ರಿಯ ಕರ್ತನಾದ ಯೇಸು ಕ್ರಿಸ್ತನು ಹೇಳಿದ್ದಾನೆ ಆತನು ತಂದೆಯಿಂದ ಹೊಂದಿದ ಮಹಿಮೆಯನ್ನು ನಿನಗೆ ಕೊಟ್ಟಿದ್ದಾನೆ ಎಂದು. ನಮ್ಮ ಕರ್ತನ ಮಾತು ಸತ್ಯವಾದದ್ದು 'ಕೊಟ್ಟಿದ್ದಾನೆ' ಎಂದ ಮೇಲೆ 'ಕೊಡಲಿಲ್ಲ' ಎಂದು ಯಾರೂ ಆತನ ಮಾತನ್ನು ತೆಗೆಯುವುದಕ್ಕೆ ಸಾಧ್ಯವೇ ಇಲ್ಲ.

ಕ್ರಿಸ್ತನು ತಂದೆಯೊಟ್ಟಿಗೆ ಅನ್ಯೋನ್ಯವಾಗಿ ಇದ್ದ ಕಾರಣ ನಮ್ಮ ಆಲೋಚನೆಗೆ ಎಟುಕದ ಹಾಗೆ ಅತಿಶಯವಾದ ಕಾರ್ಯಗಳನ್ನೆಲ್ಲಾ ಮಾಡಿದನು. ನೀನು ಸಹ ಆತನ ಹಾಗೆ ಆಗಬೇಕೆಂಬುದೇ ಆತನ ಇಷ್ಟ.

ಕ್ರಿಸ್ತನಿಗೂ ತಂದೆಗೂ ಇದ್ದ ಅನ್ಯೋನ್ಯತೆಯನ್ನು ಗಮನಿಸು. ಹೊಸ ಒಡಬಂಡಿಕೆಯಲ್ಲಿ ತಂದೆಯನ್ನು ಬಿಟ್ಟು ಕ್ರಿಸ್ತನು ಏನೂ ಮಾಡಲಿಲ್ಲ. ಪ್ರತಿಯೊಂದು ಹೆಜ್ಜೆಯಲ್ಲಿಯೂ ತಂದೆಯನ್ನು ಮುಂದಿಟ್ಟುಕೊಂಡನು. ಫಿಲಿಪ್ಪನು ಕ್ರಿಸ್ತನ ಮಾತಗಳನ್ನು ಗಮನಿಸಿ "ಸ್ವಾಮೀ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೇ ಸಾಕು ಅಂದನು. ಯೇಸು ಅವನಿಗೆ – ಫಿಲಿಪ್ಪನೇ ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ. ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ. ನಮಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ? ನಾನು ತಂದೆಯಲ್ಲಿದ್ದೇನೆ. ತಂದೆಯು ನನ್ನಲ್ಲಿ ಇದ್ದಾನೆ ಎಂದು ನೀನು ನಂಬುವದಿಲ್ಲವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡುವದಿಲ್ಲ; ತಂದೆಯು ನನ್ನಲ್ಲಿ ಇದ್ದುಕೊಂಡು ತನ್ನ ಕ್ರಿಯಗಳನ್ನು ನಡಿಸುತ್ತಾನೆ. ನಾನು ತಂದೆಯಲ್ಲಿ ಇದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆಂಬುವ ನನ್ನ ಮಾತನ್ನು ನಂಬಿರಿ; ಇಲ್ಲದಿದ್ದರೆ ಆ ಕ್ರಿಯೆಗಳನ್ನೇ ನೋಡಿ ನನ್ನ ಮಾತನ್ನು ನಂಬಿರಿ." (ಯೋಹಾನಾ 14:8–11)

ಪ್ರಿಯ ದೇವರ ಮಗುವೇ ಯೇಸುಕ್ರಿಸ್ತನು 4 ಸುವಾರ್ತೆಗಳಲ್ಲಿಯೂ ತಾನು ಮಾತನಾಡಬೇಕಾದರೆ ತಂದೆಯನ್ನು ಮುಂದಿಟ್ಟುಕೊಂಡನು. ತಂದೆಯೊಟ್ಟಿಗೆ ಅನ್ಯೋನ್ಯತೆ ಇಟ್ಟುಕೊಂಡಿದ್ದರಿಂದಲೇ ಯೇಸು ಕ್ರಿಸ್ತನ ಮಹಿಮೆಯು ಹೆಚ್ಚಾಯಿತು. ತಂದೆಯು ಯೇಸುಕ್ರಿಸ್ತನನ್ನು ಮಹಿಮೆ ಪಡಿಸಿದರು. ಯೇಸುಕ್ರಿಸ್ತನು ತಂದೆಯನ್ನು ಮಹಿಮೆ ಪಡಿಸಿದರು. ಅವರಿಬ್ಬರ ಹಾಗೆ ಅನ್ಯೋನ್ಯವಾಗಿ ಯಾರೂ ಇಲ್ಲ. ಹಾಗಾಗಿ ನೀನು ಅವರನ್ನು ನೋಡು, ತಂದೆಯೂ ಯೇಸುಕ್ರಿಸ್ತನೂ ಒಂದಾಗಿರುವ ಪ್ರಕಾರ ನೀನೂ ಅವರೊಂದಿಗೆ ಒಂದಾಗ ಬೇಕೆಂಬುದೇ ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಾರ್ಥನೆಯಾಗಿದೆ. ಈ ಪ್ರಾರ್ಥನೆಯು ನಿನ್ನಲ್ಲಿ ನೆರವೇರುವುದಕ್ಕಾಗಿ ಪ್ರಾರ್ಥಿಸು. ಪ್ರಯಾಸಪಡು. ನಿನ್ನ ಪ್ರಯಾಸಕ್ಕೆ ಆತನೇ ನಿನ್ನೊಡನಿದ್ದು ನಿನಗೆ ಸಹಾಯಮಾಡುತ್ತಾನೆ.

# 2. ಪೇತ್ರನ ಅನ್ಯೋನ್ಯತೆ

"ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು. (ಅ.ಕೃ 2:42)

ಇವರೆಲ್ಲರೂ ಅಪೊಸ್ತಲರ ಬೋಧನೆಯನ್ನು ಯಾಕೆ ಕೆಳುತ್ತಾ ಸಹೋದರರ ಅನ್ಯೋನ್ಯತೆಯಲ್ಲಿ ಕೂಡಿ ಬರುತ್ತಿದ್ದರು ಎಂದರೆ ಪೇತ್ರನು ಕ್ರಿಸ್ತನ ಪ್ರೀತಿಯನ್ನು ಜನರಿಗೆ ತಿಳಿಸುತ್ತಿದ್ದನು. ಪೇತ್ರನಿಗೂ ಕ್ರಿಸ್ತನಿಗೂ ಇರುವ ಅನ್ಯೋನ್ಯತೆಯನ್ನು ಮತ್ತೊಬ್ಬರಿಗೆ ಸಾರಿ ಹೇಳುತ್ತಿದ್ದನು. ಅನ್ಯೋನ್ಯತೆ ನೋಡುವುದರಿಂದ ಬರುವುದಿಲ್ಲ. ಸಾರುವುದರಿಂದ ಬರುತ್ತದೆ ಎಂದು ಪೇತ್ರನು ಜನರ ಮಧ್ಯದಲ್ಲಿ ಸಾರುತ್ತಿದ್ದನು. ಕಾಣದೇ ಇರುವ ಕ್ರಿಸ್ತನ ಅನ್ಯೋನ್ಯತೆಯನ್ನು ಬರೀ ಮಾತಿನಿಂದ ಹೇಳುವುದಾದರೆ ಸಾಕಾಗದು ಕಾರ್ಯದಲ್ಲಿಯೂ ತೋರಿಸಬೇಕು ಎಂದು ಎಲ್ಲರನ್ನು ಒಟ್ಟಾಗಿ ಕೂಡಿಸಿ ಅನ್ಯೋನ್ಯತೆ ಬಗ್ಗೆ ತಿಳಿಸುತ್ತಿದ್ದನು.

ಹಾಗೆಯೇ ನೀನು ಸಹಾ ಸಭೆಗೆ ತಪ್ಪದೇ ಹೋಗಬೇಕು, ಕ್ರೈಸ್ತ ಸಹೋದರರೊಟ್ಟಿಗೆ ಐಕ್ಯತೆಯಿಂದ ಇರಬೇಕು. ಆಗ ಮಾತ್ರ ನೀನು ದೇವರೊಟ್ಟಿಗೆ ಅನ್ಯೋನ್ಯವಾಗಿ ಬೆಳೆಯಲು ಸಾಧ್ಯ. ದೀಪವು ತನ್ನಷ್ಟಕ್ಕೆ ತಾನೇ ಬೆಳಗಲು ಸಾಧ್ಯವಿಲ್ಲ ದೀಪವನ್ನು ಯಾರಾದರು ಒಬ್ಬರು ಬೆಳಗಿಸಬೇಕು. ನೀನು ದೀಪವಾಗಿದ್ದೀಯಾ ಅನೇಕರು ನಿನ್ನ ಬೆಳಕಿನಲ್ಲಿ ನಡೆಯ ಬೇಕಾಗಿದೆ, ನಿನ್ನನ್ನು ಬೆಳಗಿಸುವುದು ಸಭೆಯಾಗಿದೆ. ಸಭೆಯಲ್ಲಿ ಕ್ರಿಸ್ತನು ಇಳಿದು ಬಂದು ನಿನ್ನನ್ನು ಉತ್ತಮವಾಗಿ ಬೆಳಗಿಸುತ್ತಾನೆ. ಮೇಲೆ ತಿಳಿಸಿರುವ ವಾಕ್ಯದ ಪ್ರಕಾರ ಪ್ರೇತ್ರನ ಕಾಲದ ಜನರು ಬೋಧನೆಯನ್ನು ಕೇಳುವುದಕ್ಕೆ ಒಟ್ಟುಗೂಡುತ್ತಿದ್ದರು ಎಂಬ ಮಾತಿನಲ್ಲಿ ರಹಸ್ಯವು ಅಡಕವಾಗಿದೆ. ದೇವರ ಮಗುವೇ ನಿನಗೆ ಕ್ರಿಸ್ತನ ಅನ್ಯೋನ್ಯತೆ ತುಂಬಾ ಅವಶ್ಯಕತೆಯಾಗಿದೆ. ನೀನು ಯಾರು ಎಂದು ಈ ಲೋಕಕ್ಕೆ ಅರ್ಥವಾಗಬೇಕು ಅಂದರೇ ಕ್ರಿಸ್ತನ ಅನ್ಯೋನ್ಯತೆ ನಿನ್ನಲ್ಲಿ ಬರಬೇಕು.

ಪೇತ್ರನು ಯಾರು ಎಂದು ಯಾರಿಗೂ ಅರ್ಥವಾಗಲಿಲ್ಲ. ಅವನು ಸಾಮನ್ಯನಾದ ಬೆಸ್ತಗಾರನಾಗಿ ಮೀನು ಮಾರುತ್ತಾ ತನ್ನ ಜೀವನ ಕಳೆಯುತ್ತಿದ್ದ. ಎಷ್ಟೋ ಜನರು ಅವನ ಬಳಿ ಬಂದು ಮಾತಾಡಿ ಸ್ನೇಹವನ್ನು ಬೆಳೆಸಿರಬಹುದು. ಆದರೆ 'ಅವನು ಯಾರು' ಮುಂದೆ ಅವನು ಏನಾಗಬಹುದು ಎಂದು ಯಾರೂ ತಮ್ಮ ಸ್ವಂತ ಜ್ಞಾನದಿಂದ ಕಂಡು ಹಿಡಿಯಲಾಗಲಿಲ್ಲ! ಅಷ್ಟು ಯಾಕೆ? ಅವನ ಕುಟುಂಬದವರಿಗೂ ಸಹ

ಸರಿಯಾಗಿ ಅರ್ಥವಾಗಲಿಲ್ಲ ಅನ್ನಿಸುತ್ತೆ! ಪೇತ್ರನು ತನ್ನ ಕೆಲಸದಲ್ಲಿ ತನ್ನ ಸಮಯವನ್ನು ಕಳೆಯುತ್ತಿದ್ದನು.

ಪೇತ್ರನನ್ನು ಯೇಸುಕ್ರಿಸ್ತನು ಕರೆಯುವುದಕ್ಕೆ ಮುಂಚೆ ಅವನು ಹೀಗೆ ಆಲೋಚನೆ ಮಾಡಿರಬಹುದು. "ನನ್ನ ಜೀವನ ಇಷ್ಟೇ; ಬಲೆ ಹಾಕಬೇಕು ಮೀನು ಹಿಡಿದು ಮಾರಿ, ಈ ಸಮುದ್ರದಲ್ಲಿ ನನ್ನ ಆಯುಷ್ಯವನ್ನು ಮುಗಿಸಬೇಕು, ಯಾರು ನನ್ನ ಜೊತೆ ಇರುತ್ತಾರೆ. ನನ್ನನು ಯಾರು ಇಷ್ಟ ಪಡುತ್ತಾರೆ, ನನ್ನ ಹಾಗೆ ಯಾರು ಇರೋದು ಬೇಡ" ಎನ್ನುವ ಬೇಸತ್ತಿನ ಮಾತುಗಳು ಎಷ್ಟೋ ಬಂದಿರಬಹುದು. ದಾರಿ ಕಾಣದೇ ಅಲೆದಿರಬಹುದು. ಆದರೆ ಕ್ರಿಸ್ತನು ಪೇತ್ರನನ್ನು ಕರೆಯುವಾಗ ಅವನ ಜೀವನವೇ ಬದಲಾಗಿ ಹೋಯಿತು. ಎಂತಹ ಆಶ್ಚರ್ಯ! ಮೀನು ಹಿಡಿಯುತ್ತಾ ಜೀವನ ನಡೆಸುತ್ತಿದ್ದ ಪೇತ್ರನು ಯೇಸುಕ್ರಿಸ್ತನಿಂದ ಕರೆಯಲ್ಪಟ್ಟನು. ಅಂದಿನಿಂದ ಅವನ ಗುರುತೇ ಬದಲಾಯಿತು ಯೇಸುವಿನ ಶಿಷ್ಯನೆಂದು ಕರೆಯಲ್ಪಟ್ಟನು. ಕ್ರಿಸ್ತನೊಟ್ಟಿಗೆ ಅನ್ಯೋನ್ಯತೆಯಾಗಿ ನಡೆದನು. ಚರಿತ್ರೆಯಲ್ಲಿ ಬಹಳ ದೊಡ್ಡ ಸ್ಥಾನವನ್ನು ಸಂಪಾದನೆ ಮಾಡಿದನು. 'ಪೇತ್ರನ ಹಾಗೆ ಯಾರು ಇಲ್ಲ'. ಎಂದು ಹೆಸರು ಸಂಪಾದನೆ ಮಾಡಿದ್ದಾನೆ.

ಪ್ರಿಯ ದೇವರ ಮಗುವೇ, ನಿನ್ನನ್ನು ದೇವರು ತನ್ನ ಮಗುವಾಗಿ ಅಂಗೀಕರಿಸುವವರೆಗೂ ನಿನ್ನ ಗುರುತು ಈ ಲೋಕದ ಪ್ರಕಾರವಾಗಿತ್ತು ಆದರೆ ನೀನು ದೇವರ ಕರೆಗೆ ಕಿವಿಗೊಟ್ಟು ಆತನ ಬಳಿ ಬರುವಾಗ ನಿನಗೆ ಯೇಸುಕ್ರಿಸ್ತನು 'ದೇವರಮಗು' ಎಂದು ಹೆಸರು ಕೊಟ್ಟಿದ್ದಾನೆ. ಸಭೆಗೆ ಹೋದರೆ 'ವಿಶ್ವಾಸಿ' ಎಂದು 'ನನ್ನ ಕುರಿ' ಎಂದು ನಾನು ಆರಿಸಿಕೊಂಡ 'ನನ್ನ ಸಾಧನ' ಎಂದು 'ಪಾಸ್ಟರ್' ಎಂದು 'ಬಿಷಪ್' ಎಂದು 'ರೆವರೆಂಡ್' ಎಂದು "ಸೇವಕರು, ಕ್ರೈಸ್ತರು, ಪರಿಶುದ್ಧರು, ನೀತಿವಂತರೂ, ಶಿಷ್ಯರು, ಎಂದು ಏನೆಲ್ಲಾ ಅತ್ಯುತ್ತಮವಾದ ಹೆಸರನ್ನು ಕೊಟ್ಟು ನಿನ್ನ ಸ್ನೇಹಿತರ ಮಧ್ಯದಲ್ಲಿ ನಿನ್ನ ಬಂಧುಬಾಂಧವರ ಮಧ್ಯದಲ್ಲಿ ನಿನ್ನನ್ನು ಒಂದು ನೋಟವಾಗಿ ಮಾಡಿದ್ದಾರೆ. ಆದುದರಿಂದ ನಿನ್ನನ್ನು ನೋಡುವವರು ನಿನ್ನಲ್ಲಿ ಏನೋ ಒಂದು ಪ್ರತ್ಯೇಕತೆ ಇದೆ ಎಂದು ಗಮನಿಸುತ್ತಿದ್ದಾರೆ. ಅವರೆಲ್ಲರನ್ನು ಕ್ರಿಸ್ತನ ಅನ್ಯೋನ್ಯತೆಯಲ್ಲಿ ನಡೆಸಬೇಕಾದ ಕರ್ತವ್ಯ ನಿನ್ನದಾಗಿರುತ್ತದೆ.

ಪ್ರಿಯ ದೇವರಮಗುವೇ, ಪೇತ್ರನನ್ನು ಕ್ರಿಸ್ತನು ಕರೆಯುವವರೆಗೂ ಪೇತ್ರನು ಮೀನು ಹಿಡಿಯುತ್ತಿದ್ದನು. ಒಂದು ದಿನ ನಮ್ಮ ಕರ್ತನಾದ ಯೇಸುಕ್ರಿಸ್ತನು " ಸಿಮೋನನ ದೋಣಿಯನ್ನು ಹತ್ತಿ ದಡದಿಂದ ಸ್ವಲ್ಪ ದೂರಕ್ಕೆ ನೂಕಬೇಕೆಂದು ಅವನನ್ನು ಕೇಳಿಕೊಂಡನು. ತರುವಾಯ ಆತನು ಕೂತುಕೊಂಡು ದೋಣಿಯೊಳಗಿಂದಲೇ ಆ ಜನರ ಗುಂಪಿಗೆ ಉಪದೇಶ

ಮಾಡಿದನು. ಮಾತಾಡುವದನ್ನು ಮುಗಿಸಿದ ಮೇಲೆ ಸಿಮೋನನಿಗೆ– ಆಳವಾದ ಸ್ಥಳಕ್ಕೆ ದೋಣಿಯನ್ನು ನಡಿಸಿ ಮೀನು ಬೇಟೆಗಾಗಿ ನಿಮ್ಮ ಬಲೆಗಳನ್ನು ಹಾಕಿರಿ ಎಂದು ಹೇಳಿದನು. ಅದಕ್ಕೆ ಸೀಮೋನನು ಗುರುವೇ, ನಾವು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಏನೂ ಸಿಕ್ಕಲಿಲ್ಲ; ಆದರೆ ನಿನ್ನ ಮಾತಿನ ಮೇಲೆ ಬಲೆಗಳನ್ನು ಹಾಕುತ್ತೇನೆ ಅಂದನು. ಹಾಕಿದ ಮೇಲೆ ಮೀನುಗಳು ರಾಶಿರಾಶಿಯಾಗಿ ಸಿಕ್ಕಿಕೊಂಡು ಅವರ ಬಲೆಗಳು ಹರಿದುಹೋಗುತ್ತಿದ್ದವು. ಆಗ ಅವರು ಮತ್ತೊಂದು ದೋಣಿಯಲ್ಲಿದ್ದ ತಮ್ಮ ಪಾಲುಗಾರರಿಗೆ "ನೀವು ಬಂದು ನಮಗೆ ನೆರವಾಗಬೇಕೆಂದು ಸನ್ನೆ ಮಾಡಿದರು. ಅವರು ಬಂದು ಆ ಎರಡು ದೋಣಿಗಳಲ್ಲಿ ಮೀನುಗಳನ್ನು ತುಂಬಿಸಲು ಅವು ಮುಳುಗುವ ಹಾಗಾದವು." (ಲೂಕ 5: 3–7)

ಸಮುದ್ರದಲ್ಲಿ ಬಲೆಹಾಕಿ ಮೀನು ಹಿಡಿಯಲು ಪ್ರಯಾಸ ಪಡುತ್ತಿದ್ದ ಪೇತ್ರನಿಗೆ ಮೀನು ಸಿಗಲಿಲ್ಲ ಅವನು ಚಿಂತಿಸಿ ಕುಳಿತುಕೊಳ್ಳುವಾಗ ಯೇಸುಕ್ರಿಸ್ತನು ಆತನನ್ನು ಸಂಧಿಸಲು ಅವನ ದೋಣಿಯನ್ನು ಹತ್ತಿದನು. "ಆಳವಾದ ಸ್ಥಳಕ್ಕೆ ದೋಣಿಯನ್ನು ನಡಿಸಿ ಮೀನು ಬೇಟೆಗಾಗಿ ಬಲೆಗಳನ್ನು ಹಾಕಿರಿ ಎಂದು ಹೇಳುವಾಗ" ಪೇತ್ರನು. ಗುರುವೇ, ನಾವು ರಾತ್ರಿಯೆಲ್ಲಾ ಪ್ರಯಾಸ ಪಟ್ಟರೂ ಏನು ಸಿಕ್ಕಲಿಲ್ಲ ಎಂದು ಎದುರು ಮಾತು ಹೇಳಿದ. ಇಲ್ಲಿ ಸ್ವಲ್ಪ ಚಿಂತಿಸೋಣ, ಅಲ್ಲಿ ಅವನು ಎದುರು ಮಾತನಾಡಿದ್ದು ಕರ್ತನ ಶಕ್ತಿಯನ್ನು ಸರಿಯಾಗಿ ಅರಿಯದೆ ಇರುವುದರಿಂದ. ಕೆಲವೊಮ್ಮೆ ನೀನು ಸಹ ಕಷ್ಟದಲ್ಲಿ ಸಿಲುಕಿದಾಗ ನಿನಗೆ ನಮ್ಮ ಪ್ರಿಯ ರಕ್ಷಕನಾದ ಕ್ರಿಸ್ತನ ಶಕ್ತಿ ಅರ್ಥವಾಗದೆ ನಿನ್ನ ಸ್ವಂತ ಬುದ್ಧಿಯಿಂದ ಎದುರು ಮಾತನಾಡುವುದನ್ನು ನೀನು ಗಮನಿಸು ಆಗ ಮುಂದೆ ಇರುವ ಆಶೀರ್ವಾದನ್ನು ನೀನು ಖಂಡಿತವಾಗಿ ಕಳೆದುಕೊಳ್ಳುತ್ತೀಯಾ. ದುಡುಕಿ ಮಾತಾಡುವುದಕ್ಕೆ ಮುಂದೆ ಇರಬೇಡ, ನಿನ್ನ ಎದುರು ಮನುಷ್ಯ ಏನು ಹೇಳುತ್ತಾನೆ ಎಂದು ಮೊದಲು ಅರ್ಥಮಾಡಿಕೊಂಡು ಉತ್ತರಕೊಡು. ಪೇತ್ರ ಆ ರೀತಿ ಹೇಳಿ ತಕ್ಷಣ ಹೇಳುತ್ತಾನೆ. ಆದರೆ ನಿನ್ನ ಮಾತಿನ ಮೇಲೆ ಬಲೆಗಳನ್ನು ಹಾಕುತ್ತೇನೆ ಎಂದು. ಪೇತನು ಎದುರು ಮಾತು ಹೇಳಿ ತತ್‌ಕ್ಷಣವೇ ಕರ್ತನ ಮಾತಿಗೆ ಒಪ್ಪಿಕೊಂಡಿರುವುದನ್ನು ಗಮನಿಸು. ಪೇತ್ರನಾದರೋ ಅಲ್ಲಿಯವರೆಗೂ ಯೇಸುಕ್ರಿಸ್ತನು ಮಾಡಿದಂತಹ ಅದ್ಭುತಗಳನ್ನು ಒಂದಾದರೂ ನೋಡಿರಲಿಲ್ಲ. ಆದರೂ ಕ್ರಿಸ್ತನು ಹೇಳಿದ ಹಾಗೆ ಬಲೆ ಬೀಸಿ ಎಷ್ಟೋ ಮೀನುಗಳನ್ನು ಪಡೆದುಕೊಂಡನು.

ಪೇತ್ರನು ಮೀನು ಹಿಡಿಯುವ ಆ ದಿನದ ತನ್ನ ಎಲ್ಲಾ ಪ್ರಯಾಸವನ್ನು ಮುಗಿಸಿದ್ದನು. ನಂಬಿಕೆ ಹೋಯಿತು ಇನ್ನು ಏನು ಸಿಗುವುದಿಲ್ಲ. ಇನ್ನು ಎಷ್ಟು ಬುದ್ಧಿ ಉಪಯೋಗಿಸಿದರೂ ಪ್ರಯೋಜನವಿಲ್ಲ. ನನ್ನ ಜೊತೆಗಾರರೊಟ್ಟಿಗೆ

ಎಷ್ಟೇ ಅನ್ಯೋನ್ಯತೆಯಾಗಿ ಇದ್ದು ಪ್ರಯಾಸಪಟ್ಟರೂ ಈಹೊತ್ತೂ ಏನೂ ಸಿಗುವುದಿಲ್ಲ ಎಂದು ಪೇತ್ರನು ಖಚಿತವಾಗಿ ಅರ್ಥ ಮಾಡಿಕೊಂಡ ಕಾರಣ, ಯೇಸುಕ್ರಿಸ್ತನ ಮಾತಿಗೆ ಕಿವಿಗೊಟ್ಟು ಆತನ ಮಾತನ್ನು ಅಂಗೀಕರಿಸಿ ಬಲೆ ಹಾಕುತ್ತಾನೆ, ಆ ಬಲೆಯನ್ನು ಸಮುದ್ರದ ಆಳಕ್ಕೆ ಹಾಕುವಾಗ ಮೀನುಗಳು ರಾಶಿರಾಶಿಯಾಗಿ ಸಿಕ್ಕಿಕೊಂಡು ಬಲೆಗಳು ಹರಿದುಹೋಗುವ ರೀತಿಯಲ್ಲಿ ತುಂಬಿಕೊಂಡಿತು ಆಗ ಮತ್ತೊಂದು ದೋಣಿಯಲ್ಲಿದ್ದ ತಮ್ಮ ಪಾಲುಗಾರರಿಗೆ – ನೀವು ಬಂದು ನಮಗೆ ನೆರವಾಗಬೇಕೆಂದು ಸನ್ನೆ ಮಾಡಿದರು. ದೋಣಿಗಳಲ್ಲಿ ಮೀನುಗಳು ತುಂಬಿಕೊಂಡವು. ಪೇತ್ರನಿಗೆ ತುಂಬಾ ಆಶ್ಚರ್ಯವಾಗಿ ಸ್ಥಬ್ಧನಾಗಿ ಯೇಸುವನ್ನು ನೋಡುತ್ತಾ –ಯೇಸುವಿನ ಮೊಣಕಾಲಿಗೆ ಬಿದ್ದು – ಸ್ವಾಮೀ ನಾನು ಪಾಪಾತ್ಮನು; ನನ್ನನ್ನು ಬಿಟ್ಟುಹೋಗಬೇಕು ಅಂದನು. ಯಾಕೆಂದರೆ ಅಲ್ಲಿ ನಡೆದ ಕಾರ್ಯವೂ ಎಲ್ಲರಿಗೂ ವಿಸ್ಮಯವಾಯಿತು. ಆದರೆ ಕರ್ತನು ಮೀನು ಹಿಡಿಯುವಂತಹ ಅದ್ಭುತ ಮಾತ್ರವಲ್ಲ ಮನುಷ್ಯರನ್ನು ಕರ್ತನ ರಾಜ್ಯಕ್ಕೆ ನಡೆಸುವ ಅದ್ಭುತವನ್ನು ಪೇತ್ರನ ಮುಖಾಂತರ ಮಾಡುತ್ತೇನೆ ಎಂದು ವಾಗ್ದಾನ ಮಾಡಿ ಆತನನ್ನು ಕರೆಯುವಾಗ ರಾಶಿ–ರಾಶಿ ಮೀನುಗಳನ್ನು ನೋಡಿದ ಪೇತ್ರನು ಕರ್ತನ ಮಾತನ್ನು ಅಂಗೀಕರಿಸಿ, ಯೇಸುಕ್ರಿಸ್ತನ ಶಿಷ್ಯನಾದನು. ತನ್ನ ಜೀವನವನ್ನು ಯೇಸುಕ್ರಿಸ್ತನಿಗೆ ಸಮರ್ಪಿಸಿ ಮೀನು ಹಿಡಿಯುವ ಕೆಲಸವನ್ನು ಬಿಟ್ಟು ಯೇಸುಕ್ರಿಸ್ತನನ್ನು ಅಂದಿನಿಂದ ಹಿಂಬಾಲಿಸಿದನು.

ಕರ್ತನಾದ ಯೇಸುಕ್ರಿಸ್ತನು ಮಾಡಿದಂತಹ ಒಂದೊಂದು ಅದ್ಭುತಗಳನ್ನು ಕಣ್ಣಾರೆ ನೋಡಿದನು. ಅವನ ಬಲ ಹೆಚ್ಚಿತು. ಯೇಸುಕ್ರಿಸ್ತನು ಈ ಭೂಮಿಯಲ್ಲಿ ಶಿಲುಬೆಯ ಮರಣವನ್ನು ಏರಿದಾಗ ಪೇತ್ರನು ಅಲ್ಲಿದ್ದನು. ಮರಣ ಜಯಿಸಿ ಪುನರುತ್ಥಾನವಾದ ಯೇಸುಕ್ರಿಸ್ತನನ್ನು ನೋಡಿ ನಮ್ಮ ಕರ್ತನ ಹಾಗೆ ಯಾರು ಇಲ್ಲವೇ ಇಲ್ಲ ಎಂದು ತೀರ್ಮಾನಿಸಿದನು. ಯೇಸುಕ್ರಿಸ್ತನು ಮಾಡಿದ ಸೇವೆಯನ್ನು ಪೇತ್ರನು ಮುಂದುವರಿಸಿದನು. ಆಗ ಪ್ರಥಮ ಭಾರಿ ಪರಿಶುದ್ಧಾತ್ಮನನ್ನು ಹೊಂದಿಕೊಂಡು ಪೇತ ್ರನು ಪ್ರಸಂಗಿಸುವಾಗ 3000 ಜನರು ಕರ್ತನನ್ನು ಅಂಗೀಕರಿಸಿದರು. (ಅ.ಕೃ. 2:41) ನಂತರ ಮುಂದೆ ಪ್ರಸಂಗದಲ್ಲಿ 5000 ಜನ ಗಂಡಸರು ರಕ್ಷಿಸಲ್ಪಟ್ಟರು (ಅ.ಕೃ 4:4) ಇಲ್ಲಿ ಯೇಸುಕ್ರಿಸ್ತನು ಪೇತ್ರನನ್ನು ನೋಡಿ 'ನೀನು ಇನ್ನು ಮುಂದೆ ಮನುಷ್ಯರನ್ನು ಹಿಡಿಯುವಿ' ಎಂದು ಹೇಳಿದ ಮಾತು ನೆರವೇರಿತು. ಇದಕ್ಕೆ ಕಾರಣ ಪೇತ್ರನು ಕರ್ತನನ್ನು ನಂಬಿ ಯೇಸುಕ್ರಿಸ್ತನೊಟ್ಟಿಗೆ ಅನ್ಯೋನ್ಯವಾಗಿ ನಡದದ್ದೇ.

ಪ್ರಿಯ ದೇವರ ಮಗುವೇ ಯೇಸುವಿನ ಪ್ರೀತಿಯ ಅನ್ಯೋನ್ಯತೆ ಪೇತ್ರನ ಹೃದಯವನ್ನು ಕದಲಿಸಿತು, ಪೇತ್ರ ನನ್ನದು ಅನ್ನುವುದು ಏನೂ ಇಲ್ಲ ಎಂದು

ಯಾವಾಗ ತಗ್ಗಿಸಿಕೊಟ್ಟನೋ ಆಗಲೇ ಕ್ರಿಸ್ತನ ಅನ್ಯೋನ್ಯತೆಯಲ್ಲಿ ಬೆರತು ಹೋದನು. ಆಗ ಯೇಸು ಹೇಳಿದ ಮಾತನ್ನು ಅನುಸರಿಸದ, ಕೂಡಲೇ ಅಲ್ಲಿ ಅದ್ಭುತವು ನಡೆದು ಬಂತು, ನೀನು ಈಗ ಸೋತು ಹೋಗಿದ್ದೀಯಾ? ಹಾಗಾದರೆ ನೀನು ಈಗಲೇ ಯೇಸುವಿನ ಅನ್ಯೋನ್ಯತೆಯಲ್ಲಿ ಒಂದಾಗಬೇಕು.

ನಿನ್ನ ಜೊತೆ ಸ್ನೇಹಿತರೊಟ್ಟಿಗೆ ಮನೆಯವರೊಟ್ಟಿಗೆ ಕೆಲಸದಲ್ಲಿಯೂ ಕಾಣುವವರೊಟ್ಟಿಗೆ ಅನ್ಯೋನ್ಯವಾಗಿ ಇಷ್ಟು ದಿವಸಗಳು ಇದ್ದದ್ದು ಸಾಕು. ಈಗ ಯೇಸುವಿನ ಅನ್ಯೋನ್ಯತೆಗೆ ಬಾ, ಆಗ ನಿನ್ನಲ್ಲಿ ಅದ್ಭುತ ನಡೆದು ಬರುತ್ತದೆ. ಪೇತ್ರನ ಮನಸ್ಸು ಯೇಸುವಿನ ಮಾತಿಗೆ ಯಾವ ರೀತಿ ತಿರುಗಿಕೊಂಡಿತೋ ಆ ರೀತಿಯಲ್ಲಿ ನೀನು ಸಹ ನಿನ್ನ ಎಲ್ಲಾ ಕಾರ್ಯದಲ್ಲೂ ನಿನ್ನ ಮನಸ್ಸು ನಮ್ಮ ಕರ್ತನಾದ ಯೇಸುಕ್ರಿಸ್ತನ ಕಡೆಗೆ ತಿರುಗಿಸಿಕೊಳ್ಳುವುದಾದರೆ ಪೇತ್ರನ ಹಾಗೆ ನೀನು ಸಾಧನೆಗಳನ್ನು ಮಾಡಲು ಸಾಧ್ಯವಾಗುತ್ತದೆ.

"ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ. ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ." (1ಯೋಹಾನ 1:7)

"ಆತನು ಬೆಳಕಿನಲ್ಲಿರುವಂತೆಯೇ, ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ."

ನೀನು ನಿನ್ನ ತಪ್ಪುಗಳನ್ನು ತಿಳಿದುಕೊಂಡು ಯೇಸುವಿನ ಬಳಿ ನಿನ್ನ ಮನಸ್ಸನ್ನು ಒಪ್ಪಿಸಿಕೊಡುವುದಾದರೆ, ಆತನು ನಿನ್ನ ಜೀವನವನ್ನು ರೂಪಿಸಿ, ಹೊಸ ಕಾರ್ಯಗಳನ್ನು ಮಾಡುತ್ತಾರೆ. ನಿನ್ನಲ್ಲಿ ಪಾಪ ಇರುವುದಾದರೆ ಕ್ರಿಸ್ತನ ಮಹಿಮೆಯನ್ನು ಕಾಣಲು ಸಾಧ್ಯವಿಲ್ಲ. ಎದುರು ಮನುಷ್ಯ ಏನು ಮಾತಾಡುತ್ತಾನೆ ಎಂದು ಗ್ರಹಿಸಲು ಆಗುವುದಿಲ್ಲ. ಯಾಕೆಂದರೆ ನಿನ್ನೊಳಗೆ ಇರುವ ಪಾಪವು ನಿನ್ನನ್ನು ಬಲಹೀನತೆ ಮಾಡಿ ನಡೆಸುತ್ತಿರುತ್ತದೆ, ಆಗ ಯೇಸುವಿನ ಅನ್ಯೋನ್ಯತೆಯಲ್ಲಿ ನೀನು ನಡೆಯುವುದಕ್ಕೆ ಸಾಧ್ಯವೇ ಇಲ್ಲ.

ಚಿಂತೆ ಮಾಡುತ್ತಿದ್ದೀಯಾ? ಏನು ಪಾಪ ಎಂದು? ನಿನ್ನೊಳಗೆ ಯಾವ ಪಾಪವೂ ಇಲ್ಲ ಅನ್ನಿಸುತ್ತಿದೆಯಾ? ಹಾಗೆ ಪ್ರತಿಯೊಬ್ಬರು ಚಿಂತಿಸುವುದು ಸರ್ವೇಸಾಮಾನ್ಯ. ನೀನು ಒಂದು ಭಾರಿ ನಿನ್ನ ಸೋಲುವಿಕೆಗಳನ್ನು ಗಮನಿಸು! ಯಾಕೆ ನಿನಗೆ ಸೋಲುಗಳು? ಕೆಲಸದಲ್ಲಿ ಜಿಗುಪ್ಸೆ ಯಾಕೆ? ಯಾವಾಗಲೂ ಕೊರಗುತ್ತಿದ್ದೀಯಲ್ಲ ಅದು ಯಾಕೆ? ನಿನಗೆ

ಯಾಕೆ ನೆಮ್ಮದಿಯಿಲ್ಲ? ಎಷ್ಟೇ ಸಂಪಾದನೆ ಮಾಡಿದರೂ ಸಾಕಾಗುತ್ತಿಲ್ಲ ಎಂದು ಯಾಕೆ ಚಿಂತಿಸುತ್ತಿದ್ದೀಯಾ? ನಿನ್ನ ಮನಸ್ಸಿನಲ್ಲಿ ಯಾಕೆ ಬೇಸರಿಕೆ ಕೂತಿದೆ.! ಇದನ್ನೆಲ್ಲಾ ಚಿಂತೆಮಾಡಿನೋಡಿದರೆ ನಿನಗೆ ನಿನ್ನ ಪ್ರಕಾರ ಉತ್ತರ ಸಿಕ್ಕುವುದಿಲ್ಲ. ಆದರೆ ನಿನ್ನ ತಪ್ಪುಗಳಿಂದಲೇ ಇಷ್ಟೆಲ್ಲ ತೊಂದರೆಗಳು ನಿನಗೆ ಆಗುತ್ತಿದೆ ಎಂದು ಸತ್ಯವೇದ ತಿಳಿಸುತ್ತಿದೆ. ಆದುದರಿಂದ ನಿನ್ನ ತಪ್ಪುಗಳನ್ನು ಕರ್ತನ ಬಳಿಯಲ್ಲಿ ಒಪ್ಪಿಸಿಕೊಡು ನಮ್ಮ ಕರ್ತನು ನಿನ್ನನ್ನು ಇವೆಲ್ಲದರಿಂದ ಬಿಡಿಸುತ್ತಾನೆ ಎಂದು ಮನಃಪೂರ್ವಕವಾಗಿ ನಂಬು. ನಂಬಿದರೆ ನಿನಗೆ ಕರ್ತನಿಂದ ಆಶೀರ್ವಾದಗಳು ಖಂಡಿತವಾಗಿ ಸಿಗುತ್ತದೆ.

ಒಂದು ವೇಳೆ ನೀನು ನನ್ನಲ್ಲಿ ಯಾವ ಪಾಪವು ಇಲ್ಲ ಎಂದು ಹೇಳುವುದಾದರೆ, ಯೇಸು ನಿನ್ನ ಬಳಿಗೆ ಬರುತ್ತಿರಲ್ಲಿಲ್ಲ, ನಿನಗಾಗಿ ಅವರು ಬಲಿಯಾಗುತ್ತಿರಲಿಲ್ಲ. ಪರಲೋಕದಲ್ಲಿ ನೆಮ್ಮದಿಯಾಗಿ ತಂದೆ ಬಳಿಯಲ್ಲಿ ಇರುತ್ತಿದ್ದನು. ಪ್ರತಿಯೊಬ್ಬ ಮನುಷ್ಯನು ಪಾಪ ಮಾಡಿ ದೇವರಿಂದ ದೂರವಾಗಿದ್ದಾನೆ, ಒಬ್ಬನೂ ನೀತಿವಂತನಿಲ್ಲ, ಅದಕ್ಕಾಗಿ ನಿನ್ನನ್ನು ಕ್ಷಮಿಸಿ ಸರಿಪಡಿಸಿ ಪರಿಶುದ್ಧವಾಗಿ ನಿನ್ನನ್ನು ನಡೆಸಲು ನಿನ್ನ ಬಳಿ ಆತನು ಹುಡುಕಿಕೊಂಡು ಬಂದಿದ್ದಾನೆ ಮತ್ತು ನಿನಗೆ ಅರ್ಥವಾಗುವಂತಹ ಅನೇಕ ಮಾತುಗಳನ್ನು ಮಾತಾಡುತ್ತಿದ್ದಾನೆ. 'ಯೇಸುವಿನ ಹಾಗೆ ಯಾರು ಇಲ್ಲ'ವೆಂದು ಪೇತ್ರನು ಸಂಪೂರ್ಣವಾಗಿ ಅರ್ಥಮಾಡಿಕೊಂಡು "ಈ ಪಾಪಾತ್ಮನನ್ನು ಬಿಟ್ಟು ಹೋಗು ಎಂದು ತನ್ನನ್ನೇ ತಗ್ಗಿಸಿಕೊಂಡ" ಹಾಗೆಯೇ ನೀನು ಸಹ ಪೇತ್ರನ ಹಾಗೆ ತಗ್ಗಿಸಿಕೊಂಡು ಕ್ರಿಸ್ತನ ಅನ್ಯೋನ್ಯತೆಗೆ ಬಾ. ಆಗ ಕ್ರಿಸ್ತನು ನಿನ್ನನ್ನು ಪೇತ್ರನ ಹಾಗೆ ಮೇಲಕ್ಕೆ ತರುವನು.

ಒಂದು ವೇಳೆ, ನೀನು ಯಾರಿಗೂ ಬೇಡವಾದ ವ್ಯಕ್ತಿಯಾಗಿ ಜೀವಿಸುತ್ತಿರಬಹುದು, ನಿನ್ನನ್ನು ಗುರುತೇ ಹಿಡಿಯದ ಜನರ ಮಧ್ಯದಲ್ಲಿ ನೀನು ಜೀವಿಸುತ್ತಿರಬಹುದು, ಆದರೆ ಯೇಸುಕ್ರಿಸ್ತನು ನಿನಗೆ ಮಾಡಿರುವಂತಹ ಅದ್ಭುತ ಕಾರ್ಯವನ್ನು ನಿನ್ನ ಬಾಯಿಂದ ಪ್ರಕಟಿಸು ಆಗ ಅವರ ಬಾಯಲ್ಲಿ ಬರುತ್ತೇ "ನಿನ್ನ ಹಾಗೆ ಯಾರು ಇಲ್ಲ" ನಿನ್ನಿಂದ ನನಗೆ ಸಂತೋಷ, ಸಮಾಧಾನ ಬಂತು ನೀನು ಹೇಳಿದಾಗೆ ನಾನು ಕೇಳುತ್ತೇನೆ. ನೀನು ನಂಬಿರುವ ಯೇಸುವನ್ನು ನಾನು ಸಹ ಹಿಂಬಾಲಿಸುತ್ತೇನೆ, ಆತನಲ್ಲಿ ನಾನು ಸಹ ಅನ್ಯೋನ್ಯತೆಯಾಗಿ ಬೆಳೆಯೆತ್ತೇನೆ ಎಂದು ಹೇಳುತ್ತಾರೆ. ಆಗ ನಿನ್ನ ಮುಖಾಂತರ ಯೇಸುಕ್ರಿಸ್ತನ ನಾಮ ಮಹಿಮೆ ಹೊಂದಿಕೊಳ್ಳುತ್ತದೆ.

ನಿನ್ನ ಹಳೆಯ ಜೀವನ ಶೈಲಿಯನ್ನು ಬಿಟ್ಟುಬಿಡು, ನಿನ್ನ ಬಾಯಿಂದ ಹೊಲಸು ಮಾತು, ಸುಳ್ಳು ಮಾತು, ಕುಚೋದ್ಯ ಮಾತುಗಳು ಬರುವುದನ್ನು ನಿಲ್ಲಿಸಿ ಇವೆಲ್ಲದರಿಂದ ದೂರವಿರು. ಹೊಸ ವ್ಯಕ್ತಿಯಾಗಿ ನೀನು ಹೆಜ್ಜೆ

ಇಟ್ಟುಕೊಂಡು ಮುಂದೆ ಹೋಗು, ಆಗ ನಿನ್ನನ್ನು ಗಮನಿಸುವ ವ್ಯಕ್ತಿಗಳು ಖಂಡಿತವಾಗಿ ನಿನ್ನನ್ನು ಹುಡುಕಿಕೊಂಡು ಬರುತ್ತಾರೆ. ಯೇಸುವಿನ ಪ್ರೀತಿಯನ್ನು ಮತ್ತು ಅದ್ಭುತಗಳನ್ನು ಹೊಂದಿಕೊಳ್ಳುವ ಸಲುವಾಗಿ ನಿನ್ನನ್ನು ಆಶ್ರಯಿಸುತ್ತಾರೆ. ಆಗ ನಿನ್ನ ಬಳಿ ಇರುವ ಜನಾಂಗಗಳು ನಿನ್ನನ್ನು ನೋಡಿ 'ನಿನ್ನ ಹಾಗೆ ಯಾರು ಇಲ್ಲ' ಎಂದು ಎಲ್ಲರೂ ಗ್ರಹಿಸಿಕೊಳ್ಳುತ್ತಾರೆ. ಯೇಸುವಿನ ಪ್ರೀತಿ ಅನ್ಯೋನ್ಯತೆ ನಿನ್ನಲ್ಲಿ ನೆಲೆಗೊಂಡಾಗ ಆಶ್ಚರ್ಯಕರವಾದ ಕಾರ್ಯಗಳು ನಿನ್ನ ಜೀವನದಲ್ಲಿ ಖಂಡಿತವಾಗಿ ನಡೆದುಬರುತ್ತದೆ.

ಯೇಸುವನ್ನು ತಿಳಿದಿರುವ ಜನರೊಟ್ಟಿಗೆ ಅನ್ಯೋನ್ಯತೆಯಾಗಿ ಇರುವಾಗ ಮಾತ್ರವೇ ನೀನು ವಾಕ್ಯಗಳನ್ನು ಅರ್ಥ ಮಾಡಿಕೊಂಡು ಮತ್ತೊಬ್ಬರಿಗೂ ತಿಳಿಸಲು ಸಾಧ್ಯವಾಗುತ್ತದೆ. ನಿನಗೆ ಅರ್ಥವಾದ ನಂತರ ನಿನ್ನ ಬಳಿಯಲ್ಲಿ ನಿನ್ನ ಮಾತನ್ನು ಕೇಳುವ ನಿನ್ನ ಜನರು ಕ್ರಿಸ್ತನ ಪ್ರೀತಿ ಮತ್ತು ಅನ್ಯೋನ್ಯತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಕ್ರಿಸ್ತನ ಮಾತುಗಳನ್ನು ಕಾರ್ಯರೂಪದಲ್ಲಿ ಒಬ್ಬೊಬ್ಬರೊಟ್ಟಿಗೆ ಪೇತ್ರನ ಹಾಗೆ ಸಾರಿ ಹೇಳುವಾಗ ನಿನಗೂ ಆ ವ್ಯಕ್ತಿಗೂ ಮತ್ತು ಆ ವ್ಯಕ್ತಿಗೂ ಕ್ರಿಸ್ತನಿಗೂ ಅನ್ಯೋನ್ಯತೆ ಹೆಚ್ಚಾಗಿ ಬೆಳೆಯಲು ಸಾಧ್ಯವಾಗುತ್ತದೆ.

ಅದಕ್ಕೋಸ್ಕರ ಪ್ರಿಯ ದೇವರ ಮಗುವೇ, ಪೇತ್ರನ ಹಾಗೆ ಕ್ರಿಸ್ತನೊಟ್ಟಿಗೆ ಅನ್ಯೋನ್ಯತೆಯಾಗಿ ನಡೆಯಲು ಪ್ರಯಾಸಪಡು ಆಗ ನಿನ್ನನ್ನು ನೋಡುವವರು 'ನೀನು ನಮ್ಮೆಲ್ಲರಿಗಿಂತ ಪ್ರತ್ಯೇಕವಾಗಿ ವಿಶೇಷವಾಗಿ ಕಾಣಿಸುತ್ತೀಯಾ 'ನಿನ್ನ ಹಾಗೆ ಯಾರೂ ಇಲ್ಲ' ಎಂದು ನಿನ್ನ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಈ ಲೋಕದಲ್ಲಿ ದೇವರ ಮಕ್ಕಳು ಯಾವಾಗಲೂ ವಿಶೇಷ ರೀತಿಯಲ್ಲಿಯೇ ಇರಬೇಕು. ಪಾಪದೊಟ್ಟಿಗೆ ಅನ್ಯೋನ್ಯತೆಯಾಗಿ ಜೀವಿಸುತ್ತಿರುವ ಜನರ ಬಳಿಯಲ್ಲಿ ಪರಿಶುದ್ಧತೆಯಲ್ಲಿ ಅನ್ಯೋನ್ಯವಾಗಿ ಜೀವಿಸುವುದನ್ನು ಕಲಿಸಿಕೊಡುವ ವ್ಯಕ್ತಿಯಾಗಿರಬೇಕು.

# 3. ವಾಕ್ಯದಲ್ಲಿ ಜಯ

ಈ ಪ್ರಪಂಚದಲ್ಲಿರುವ ನಮ್ಮ ಪೂರ್ವಿಕರ ಸಾಧನೆಯ ಹಿಂದೆ ಇರುವ ಒಂದು ರಹಸ್ಯವನ್ನು ನಾವು ನೋಡುವಾಗ ಅವರೆಲ್ಲರು ಸತ್ಯವೇದವನ್ನು ಓದಿ ಅದರಲ್ಲಿ ಬರೆದಿರುವ ವಾಕ್ಯಗಳನ್ನು ಅರ್ಥಮಾಡಿಕೊಂಡು ಒಂದೊಂದು ಆಶ್ಚರ್ಯವಾದ ಸಾಧನೆಯನ್ನು ಮಾಡಿ ಜಯ ಹೊಂದಿದ್ದಾರೆ.

ಗಾಂಧೀಜಿಯು ಈ ಲೋಕದಲ್ಲಿ ಸ್ವಾತಂತ್ರ್ಯವನ್ನು ತಂದು ಕೊಡಲು ಆತನು ತೆಗೆದುಕೊಂಡ ವಾಕ್ಯ ನಮ್ಮ ಸತ್ಯವೇದದಿಂದಲೇ ಆಗಿದೆ. 'ಮದ್ಯಪಾನ ಮಾಡಬೇಡಿರಿ' ಎಂದು ಹೇಳಿದರು ಈ ಮಾತು ಸತ್ಯವೇದದಲ್ಲಿ ಜ್ಞಾನೋ 23:21 ರಲ್ಲಿ ಹೀಗೆ ಬರೆಯಲ್ಪಟ್ಟಿದೆ "ಕುಡುಕನೂ ಹೊಟ್ಟೆಬಾಕನೂ ದುರ್ಗತಿಗೆ ಬರುವರು" ಎಂದು ಎರಡನೆಯ ಮಾತು "ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆಯನ್ನು ತೋರಿಸು" ಎಂದು ಈ ಮಾತು ಸತ್ಯವೇದದಲ್ಲಿ "ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು" ಎಂದು 'ಮತ್ತಾಯ 5:39' ರಲ್ಲಿ ಬರೆಯಲ್ಪಟ್ಟಿದೆ. 'ಶಾಂತವಾಗಿರುವುದಾದರೆ ಜಯಿಸುತ್ತೇವೆ' ಎಂದು ಶಾಂತಿಯಿಂದ ಹೇಗೆ ಇದ್ದರು ಎಂದರೆ ಸತ್ಯವೇದದಲ್ಲಿ ಯೋಹಾನ 14:27ರಲ್ಲಿ ಹೀಗೆ ಬರೆಯಲ್ಪಟ್ಟಿದೆ "ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ. ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ. ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ ಹೆದರದಿರಲಿ" ಎಂದು ಹೇಳುತ್ತದೆ. ಮಹಾತ್ಮ ಗಾಂಧಿಯವರು ಕಳವಳಗೊಳ್ಳದೇ ಆ ಬ್ರಿಟೀಷರಿಗೆ ಬಿಳಿಯರಿಗೆ ಹೆದರದೇ ಇದ್ದದ್ದು ನಮ್ಮ ಪ್ರಿಯ ಕರ್ತನ ವಾಗ್ದಾನ ವಚನವಾದ ಯೋಹಾನ 14:27ನೇ ವಾಕ್ಯವನ್ನು ಗಾಂಧೀಜಿಯವರು ನಂಬಿದರು ಆದುದರಿಂದಲೇ ಬಹು ಶಾಂತಿಯಿಂದ ಉಪವಾಸ ಯುದ್ಧಮಾಡಿದರು. 40 ದಿನ ಚರಿತ್ರೆಯ ಪುಸ್ತಕಗಳಲ್ಲಿ ಉಪವಾಸ ಮಾಡಿರುವುದು ನಮ್ಮ ಕರ್ತನಾದ ಯೇಸುಕ್ರಿಸ್ತನು ಆಗಿದ್ದಾರೆ (ಮತ್ತಾಯ 4:2) "ಆತನು ನಾಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ" ಎಂದು ಸತ್ಯವೇದ ಹೇಳುತ್ತದೆ.

ಪ್ರಿಯ ದೇವರ ಮಗುವೇ ಗಾಂಧೀಜಿಯಂತ 'ಮಹಾನ್ ವ್ಯಕ್ತಿಯೂ ಯಾರೂ ಇಲ್ಲ' ಆತನ ಹಾಗೆ ಒಳ್ಳೆ ಸಾಧನೆ ಇದುವರೆಗೂ ಯಾರೂ

ಮಾಡಲಿಲ್ಲ ಎಂದು ಗಾಂಧೀಜಿಯವರು ಕರೆಯಿಸಿಕೊಳ್ಳುವುದಕ್ಕೆ ಮುಖ್ಯ ಕಾರಣವೇ ಸತ್ಯವೇದದ ವಾಕ್ಯಗಳಲ್ಲಿ ಅವರು ಇಟ್ಟ ವಿಶ್ವಾಸವಾಗಿದೆ.

ಅಷ್ಟೇ ಅಲ್ಲ ನಮ್ಮ ಪೂರ್ವಿಕರ ಒಂದೊಂದು ಸಾಧನೆಯಲ್ಲಿಯೂ ನಮ್ಮ ಪ್ರಿಯ ರಕ್ಷಕನಾದ ಯೇಸುಕ್ರಿಸ್ತನ ಮಾತುಗಳನ್ನು ಅವರೆಲ್ಲರೂ ಅಳವಡಿಸಿಕೊಂಡು ಅನೇಕಾನೇಕ ಸಾಧನೆಗಳನ್ನು ಮಾಡುತ್ತಾ ಈ ಲೋಕದಲ್ಲಿ ಅತ್ಯಾಶ್ಚರ್ಯವಾದ ಸಂಗತಿಗಳನ್ನೆಲ್ಲಾ ಕಂಡುಹಿಡಿದು ಪ್ರಸಿದ್ಧಿಗೆ ಬಂದಿದ್ದಾರೆ.

ನಮ್ಮ ಪೂರ್ವಿಕರಲ್ಲಿ ಅನೇಕರು 'ಇಂತಹ ಮಹಾನ್ ವ್ಯಕ್ತಿಗಳ ಹಾಗೆ ಯಾರೂ ಇಲ್ಲ' ಎಂದು ಪ್ರತಿಯೊಬ್ಬ ವ್ಯಕ್ತಿಯೂ ಹೊಗಳುವ ಹಾಗೆ ಜೀವಿಸಿ ಚರಿತ್ರೆಯಲ್ಲಿ ಹೆಸರು ಗಳಿಸಿ ಹೊರಟುಹೋದರು.

"ಸರ್ವರಲ್ಲಿಯೂ ಸರ್ವಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ (1ಕೊರಿಂಥ 12:6)

ಪ್ರಿಯ ದೇವರಮಗುವೇ ನೀನು ಸೃಷ್ಟಿಯಾಗಿರುವುದು ವ್ಯರ್ಥಕ್ಕೋಸ್ಕರ ಅಲ್ಲವೇ ಅಲ್ಲ ನೀನು ಒಂದು ಸಾಧನೆಯನ್ನು ಮಾಡಲೇ ಬೇಕು. ಅದಕ್ಕೆ ನಿನಗೆ ಈ ಲೋಕದಲ್ಲಿ ಸರಿಯಾದ ಬೆಂಬಲ ಖಂಡಿತವಾಗಿ ಸಿಕ್ಕುವುದೇ ಇಲ್ಲ. ನಿನಗೆ ಬೆಂಬಲ ಅತ್ಯಾವಶ್ಯಕವಾಗಿ ಬೇಕು, ಅದಕ್ಕಾಗಿ ನನ್ನ ಪ್ರಿಯ ಕರ್ತನು ನಮ್ಮನ್ನು ಅತೀ ಪ್ರೀತಿಮಾಡಿ ಕೊಟ್ಟಿರುವ ಸತ್ಯವೇದವನ್ನು ಹಗಲಿರುಳು ಓದುತ್ತಾ ನಿನ್ನ ಕೆಲಸ ಈ ಭೂಮಿಯಲ್ಲಿ ಏನಾಗಿದೇ ಎಂದು ತಿಳಿದುಕೊಳ್ಳಲು ಪ್ರಯಾಸಪಡು. ನಿನ್ನ ಪ್ರಯಾಸಕ್ಕೆ ಕರ್ತನೊಟ್ಟಿಗೆ ಮೊದಲು ನಿನ್ನ ಅನ್ಯೋನ್ಯತೆ ಬಹು ಮುಖ್ಯವಾಗಿದೆ. ಕರ್ತನು ಪ್ರತಿಯೊಬ್ಬರನ್ನು ಸೃಷ್ಟಿಸಿ ಅವರಿಗೆ ಒಂದೊಂದು ತಲಾಂತನ್ನು ಕೊಟ್ಟಿರುತ್ತಾನೆ. ನಿನ್ನ ತಲಾಂತು ಏನಾಗಿದೆಯೋ ಕಂಡುಹಿಡಿದು ಅದನ್ನು ಸಾರ್ಥಕಪಡಿಸಿಕೋ. ಎಷ್ಟೋ ಜನರು ಹುಟ್ಟಿ ವ್ಯರ್ಥವಾಗಿ ಸತ್ತುಹೋದರು. ಕೆಲವರು ಅವರಲ್ಲಿರುವ ತಲಾಂತನ್ನು ಮುಚ್ಚಿಟ್ಟುಕೊಂಡು ವ್ಯರ್ಥಮಾಡಿಕೊಂಡರು, ಇನ್ನು ಕೆಲವರು ತಾತ್ಸಾರ ಮಾಡಿದರು, ಇನ್ನು ಕೆಲವರು ಅರ್ಥಮಾಡಿಕೊಳ್ಳಲೇ ಇಲ್ಲ. ನೀನಾದರೋ ಅವರೆಲ್ಲರ ಪಟ್ಟಿಯಲ್ಲಿ ಸೇರಲೇಬಾರದು, ಸುಮ್ಮನೆ ಹುಟ್ಟಿ ಸತ್ತುಹೋದರೆ ನಿಜವಾಗಲೂ ಹುಟ್ಟಿ ವ್ಯರ್ಥ. ನಿನ್ನ ಜನ್ಮ ಸಾರ್ಥಕವಾಗಲೇ ಬೇಕು. ನಿನ್ನ ಪೂರ್ವಿಕರಿಗೆ ಸಹಾಯ ಮಾಡಿದ ದೇವರು ನಿನಗೂ ಸಹಾಯ ಮಾಡುತ್ತಾನೆ. ನೀನು ಆತನು ಕೊಟ್ಟಿರುವ ಸತ್ಯವೇದ ಹಿಡಿಯುವುದಾದರೆ ನಿನ್ನ ಮುಖಾಂತರವೂ ಕರ್ತನು ಆಶ್ಚರ್ಯಕರವಾದ ಕೆಲಸವನ್ನು ಮಾಡಿಸುತ್ತಾನೆ.

# 4. ಕಲಿತಿಕೋ

"ಜನರೆಲ್ಲರನ್ನು ನನ್ನ ಹತ್ತಿರಕ್ಕೆ ಕೂಡಿಸು, ಅವರು ತಾವು ಭೂಮಿಯ ಮೇಲಿರುವ ದಿನಗಳಲ್ಲೆಲ್ಲಾ ನನಗೆ ಭಯಭಕ್ತಿಯಿಂದಿರುವದಕ್ಕೆ ಕಲಿತುಕೊಂಡು ತಮ್ಮ ಮಕ್ಕಳಿಗೂ ಕಲಿಸಿಕೊಡುವಂತೆ ಅವರಿಗೆ ಆಜ್ಞೆಗಳನ್ನು ತಿಳಿಸುತ್ತೇನೆ" (ಧರ್ಮೋ 4:10)

ಹಳೇ ಒಡಂಬಡಿಕೆಯಲ್ಲಿ ನಮ್ಮ ತಂದೆ ದೇವರು ಬಹು ತಾಳ್ಮೆಯಿಂದ ಜನರಿಗೆ ಈ ಭೂಮಿಯ ಮೇಲೆ ಇರುವಾಗ ಭಯ-ಭಕ್ತಿಯಿಂದ ಹೇಗೆ ಜೀವಿಸಬೇಕೆಂದು ಕಲಿಸಿಕೊಟ್ಟಂತೆಯೇ ಹೊಸ ಒಡಂಬಡಿಕೆಯಲ್ಲಿ ಅನೇಕ ವಾಕ್ಯಗಳ ಮೂಲಕ ನಮ್ಮನ್ನು ಕರ್ತನು ನಡೆಸುತ್ತಿದ್ದಾನೆ. ಪ್ರತಿ ದಿನವೂ ಕ್ರಿಸ್ತನ ಮಕ್ಕಳು ಕಲಿತಿಕೊಳ್ಳಲು ಮುಂದಾಗಿರಬೇಕು. ಯಾಕೆಂದರೆ ಈ ಲೋಕದ ಜನರು ಕಲಿಯಲು ಇಷ್ಟಪಡುವುದಿಲ್ಲ. ಸ್ವಲ್ಪ ಏನಾದರೂ ಕಲಿತುಬಿಟ್ಟರೇ 'ನೀನು ನನಗೆ ಹೇಳುವಷ್ಟು ದೊಡ್ಡ ವ್ಯಕ್ತಿಯಾಗಿಬಿಟ್ಟಿಯಾ' ಎಂದು ಹೇಳಿ ತನ್ನನ್ನು ಹೆಚ್ಚಿಸಿಕೊಂಡು ಮಾತನಾಡುತ್ತಾರೆ. "ನೀನಾದರೋ ಕರ್ತನ ಧರ್ಮವನ್ನು ಅಂತದೆಂದು ಕಲಿತುಕೊಳ್ಳಲಿಲ್ಲ"(ಎಫೆಸ 4:20) ಪ್ರತಿದಿನವು ಕರ್ತನ ಜ್ಞಾನವನ್ನು ಕಲಿತುಕೊಳ್ಳಲು ಕರೆಯಲ್ಪಟ್ಟ ನೀನು ಈ ಲೋಕದವರ ಹಾಗೆ ಇರಬಾರದು. ಅವರು ನಿನ್ನ ಹಾಗೆ ಇಲ್ಲ. ನೀನು ಅವರ ಹಾಗೆ ಇರಬಾರದು. ನೀನು ಯಾವಾಗಲೂ ವ್ಯತ್ಯಾಸವಾಗಿಯೇ ಇರಬೇಕು.

"ಕಷ್ಟಾನುಭವವು ಹಿತಕರವಾಯಿತು; ಅದರಿಂದಲೇ ನಿನ್ನ ನಿಬಂಧನೆಗಳನ್ನು ಕಲಿತೆನು: (ಕೀರ್ತನೆ 119:71)

ಸೋಲನ್ನು ಯಾರೂ ಬಯಸುವುದಿಲ್ಲ, ಸೋಲು ಉಂಟಾಗುವಾಗ ಅಂತರ್ಯವು ವ್ಯಥೆಗೆ ಒಳಗಾಗುವದು. ಯಾಕೆ ಒಂದು ವ್ಯಕ್ತಿಗೆ ಸೋಲುಗಳು ಉಂಟಾಗುತ್ತದೆ ಅಂದರೆ ಆ ವ್ಯಕ್ತಿಯು ತನ್ನ ಜೀವನದಲ್ಲಿ ಕರ್ತನ ಮಾರ್ಗವನ್ನು ಕಲಿತುಕೊಳ್ಳುವುದಿಲ್ಲ. ಮತ್ತು ಭಯಭಕ್ತಿಯನ್ನು ಬೆಳೆಯಿಸಿಕೊಳ್ಳುವುದಿಲ್ಲ. ಅದಕ್ಕಾಗಿ ಸೋಲು ಉಂಟಾಗುತ್ತದೆ. ಆಗ ಅಂತಹ ಸೋಲನ್ನು ಸಹಿಸಲಾರದೆ ಆತ್ಮಹತ್ಯೆಗೆ ಎಷ್ಟೋ ಮಂದಿ ಶರಣಾಗಿ ಹೋಗುತ್ತಿದ್ದಾರೆ. ಸೋಲು ಮನಸ್ಸಿಗೆ ಸಮಾಧಾನ ಕೊಡುವುದಿಲ್ಲ ಹೆಚ್ಚು ಗಲಿಬಿಲಿಯನ್ನು ಉಂಟುಮಾಡುತ್ತದೆ, ಮನಸ್ಸು ಕೆಟ್ಟು ಹೋದಾಗ ಯಾರೂ ಹೇಳುವ ಮಾತನ್ನು ಕೇಳಲು ಇಷ್ಟ ಪಡುವುದಿಲ್ಲ, ಆದರೆ ನೀನಾದರೋ ಆ ರೀತಿ ಇರಬಾರದು ಪ್ರತಿದಿನವೂ ಹೊಸ-ಹೊಸದಾಗಿ ಕ್ರಿಸ್ತನಲ್ಲಿ ಕಲಿತುಕೊಳ್ಳಲು

ನಿನ್ನ ಮನಸ್ಸು ಸಿದ್ಧವಾಗಿರಬೇಕು, "ನಿನ್ನ ಕೈಗಳು ನನ್ನನ್ನು ರೂಪಿಸಿ ನಿಲ್ಲಿಸಿದವು; ನಿನ್ನ ಆಜ್ಞೆಗಳನ್ನು ಕಲಿಯುವುದಕ್ಕೆ ನನಗೆ ಬುದ್ಧಿಯನ್ನು ಕೊಡು (119:73) ಎಂದು ನೀನು ಕರ್ತನ ಬಳಿಯಲ್ಲಿ ತಗ್ಗಿಸಿಕೊಂಡು ಕೇಳುವಾಗ ನಿನ್ನ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಗೆಲ್ಲಲು ನಿನಗೆ ಸಾಧ್ಯವಾಗುತ್ತದೆ. ನೀನು ಸಮಸ್ಯೆಯನ್ನು ಗೆಲ್ಲುವಾಗ ನಿನ್ನನ್ನು ನೋಡುವ ಜನರು 'ನಿನ್ನ ಹಾಗೆ ಸಮಸ್ಯೆಯನ್ನು ಯಾರು ಎದುರಿಸಲಿಲ್ಲ' ಎಂದು ನಿನ್ನನ್ನು ನೋಡಿ ಮಾತನಾಡಿಕೊಳ್ಳುತ್ತಾರೆ.

"ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ;" (ಮತ್ತಾಯ 11:29)

ಕರ್ತನ ಮನಸ್ಸು ಗಮನಿಸಿದರೆ ಕರ್ತನ ಬಳಿಯಲ್ಲಿಯೇ ನಿನಗೆ ವಿಶ್ರಾಂತಿಸಿಗುತ್ತದೆ. ಆತನ ನೊಗವನ್ನು ನೀನು ತೆಗೆದುಕೊಳ್ಳಲು ಕಲಿತುಕೋ. ಆತನಿಗಾಗಿ ನೀನು ಜೀವಿಸುವುದಾದರೆ ನಿನ್ನ ಬಗ್ಗೆ ನಿನಗೆ ಸಂತೋಷವಾಗುತ್ತದೆ. ಕರ್ತನಿಗೆ ಸಮಸ್ಯೆಯನ್ನು ಒಪ್ಪಿಸಲು ಕಲಿಯದೇ ಇರುವವರು ಸದಾಕಾಲ ಇಕ್ಕಟ್ಟಿನ ಮನಸ್ಸಿನಲ್ಲಿ ಸಿಲುಕಿಕೊಂಡಿರುತ್ತಾರೆ. ಮತ್ತೊಬ್ಬರನ್ನು ಬಿಡಿಸುವ ಮೊದಲು ನೀನು ಕರ್ತನಲ್ಲಿ ಕಲಿಯ ಬೇಕಾದದ್ದನ್ನೆಲ್ಲಾ ಹಂತ-ಹಂತವಾಗಿ ಕಲಿತುಕೋ.

## ಪಾಪವನ್ನು ಜಯಿಸಲು ಕಲಿತುಕೋ:

"ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ, ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು." (1ಯೋಹಾನ 1:8,9)

ನಿನಗೆ ಭಯಭಕ್ತಿ ಕರ್ತನಲ್ಲಿ ಹೆಚ್ಚಾಗಲಿ, ಆಗ ಕ್ರಿಸ್ತನ ಪ್ರೀತಿ ರುಚಿಸಿ ತಿಳಿಯಲು ನಿನಗೆ ಸಾಧ್ಯವಾಗುತ್ತದೆ, ಆದಿಯಲ್ಲಿ ತಂದೆ-ತಾಯಿಗಳಾದ ಆದಾಮ ಹವ್ವಳು ಶೋಧನೆಗೆ ಒಳಗಾಗಿ ಪಾಪದಲ್ಲಿ ಬಿದ್ದರು, ಕರ್ತನು ತಿನ್ನಬಾರದೆಂದು ಹೇಳಿದ ಕೆಟ್ಟದರ ಒಳ್ಳೆಯದರ ಅರಿವನ್ನು ಹುಟ್ಟಿಸುವ ಮರದಹಣ್ಣನ್ನು ತಿಂದದ್ದರಿಂದ ಭಯ-ಭಕ್ತಿಯನ್ನು ಕಳೆದುಕೊಂಡರು. ಅವರಿಗೆ ಎದುರಾದ ಶೋಧನೆ ಅವರನ್ನು ಜಯಿಸಿತು, ಅದರ

ಪರಿಣಾಮವಾಗಿ ಭೂಮಿಯಲ್ಲಿ ಪಾಪ ಬಂದಿತು, ವ್ಯಾಧಿ ಬಂದಿತು, ಮರಣ ಬಂದಿತು, ಆ ಪಾಪವು ಬೆಳೆಯುತ್ತಾ ಬೆಳೆಯುತ್ತಾ ನಿಮ್ಮ ಪೂರ್ವಿಕರ ಮುಖಾಂತರ ನಿನ್ನೊಳಗೆ ಅದು ಪ್ರವೇಶಿಸಿದೆ. ಆದರೆ ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಲು ನಮ್ಮ ಕರ್ತನು ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿದ್ದಾನೆ. ಹಾಗಾಗಿ ನೀನು ಎಲ್ಲಾ ಪಾಪವನ್ನು ಜಯಿಸಲು ಕರ್ತನು ತನ್ನ ರಕ್ತವನ್ನು ನಿನಗೆ ಕಳುಹಿಸಿ ಕೊಟ್ಟು ನಿನ್ನನ್ನು ಶುದ್ಧಮಾಡಲು ಇಷ್ಟಪಡುತ್ತಿದ್ದಾನೆ. ಈಗಲೇ ಪಶ್ಚಾತ್ತಾಪ ಪಡುವುದನ್ನು ಕಲಿತಿಕೋ. ಯೇಸುಕ್ರಿಸ್ತನ ಬಳಿ ಪ್ರಾರ್ಥಿಸು.

ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. (ಇಬ್ರಿಯರಿಗೆ 5:8)

ಯೇಸುಕ್ರಿಸ್ತನು ತಂದೆಯ ಏಕೈಕ ಮಗನಾದರೂ ಬಾಧೆಗಳನ್ನು ಅನುಭವಿಸಲು ವಿಧೇಯತೆಯನ್ನು ಕಲಿತುಕೊಂಡ ಹಾಗೆ ನೀನು ವಿಧೇಯತೆಯನ್ನು ಕಲಿತುಕೋ, ನಿನ್ನಲ್ಲಿ ಕರ್ತನ ಚಿತ್ತವು ನೆರವೇರಬೇಕಾಗಿದೆ ಅದಕ್ಕಾಗಿ ನಿನಗೆ ವಿಧೇಯತೆ ತುಂಬಾ ಮುಖ್ಯವಾಗಿ ಬೇಕಾಗಿದೆ. ನೀನು ಕ್ರಿಸ್ತನ ಬಳಿಯಲ್ಲಿ ಈ ವಿಧೇಯತೆಯನ್ನು ಕೇಳಿ ಪಡಕೊಳ್ಳಲು ಈಗಲೇ ಕಲಿತಿಕೋ.

"ಯೌವನಸ್ಥನು ತನ್ನ ನಡತೆಯನ್ನು ಶುದ್ಧಪಡಿಸಿಕೊಳ್ಳುವದು ಯಾವದರಿಂದ? ನಿನ್ನ ವಾಕ್ಯವನ್ನು ಗಮನಿಸಿ ನಡೆಯುವದರಿಂದಲೇ" (ಕೀರ್ತ 119:9)

ನೀನು ಕರ್ತನ ಬಳಿಗೆ ಬಂದು ಹೊಸ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ನಿನಗೆ ವಿರೋಧವಾಗಿ ಪ್ರಪಂಚ, ಶರೀರ, ಮತ್ತು ಸೈತಾನನು ನಿನ್ನೊಟ್ಟಿಗೆ ಹೋರಾಟ ನಡೆಸುವುದು. ಆಗ ನೀನು ಧೈರ್ಯವಾಗಿ ಈ ಲೋಕವನ್ನು ಜಯಿಸಬೇಕು, ಎಲ್ಲಾ ರೀತಿಯ ಪಾಪಶೋಧನೆಗಳನ್ನೂ ಹೋರಾಟಗಳನ್ನೂ ಸೈತಾನನು ನಿನ್ನ ಮುಂದೆ ತರುವನು, ಆಕಾಶ ಮಂಡಲದ ದುರಾತ್ಮ ಸೇನೆಗಳು ನಿನ್ನೊಂದಿಗೆ ಹೋರಾಡುತ್ತವೆ, ನಿನ್ನಲ್ಲಿ ಆಶಪಾಶಗಳು ಪ್ರಪಂಚದ ಮೇಲಿರುವ ಆಶೆ ನೀನು ದೇವರನ್ನು ಬಿಟ್ಟು ಭಯಭಕ್ತಿಯಿಲ್ಲದೆ ಜೀವಿಸುತ್ತಾ ಅಲೆಯುವ ಹಾಗೆ ದುರಾತ್ಮಗಳು ನಿನ್ನ ವಿರುದ್ಧವಾಗಿ ಯಾವಾಗಲೂ ಯುದ್ಧಮಾಡುತ್ತಿರುತ್ತದೆ. ಪ್ರಪಂಚದ ಸ್ನೇಹ ಪ್ರೀತಿಯನ್ನು ದೇವರಿಗೂ ಮತ್ತು ನಿನಗೂ ಮಧ್ಯದಲ್ಲಿ ತಂದು ಹಾಕಿ ನಿನ್ನನ್ನು ಜಯಿಸಲು ಕಾಯುತ್ತಿರುತ್ತದೆ. ಈ ಪ್ರಪಂಚದ ಪ್ರೀತಿ ನಿನ್ನನ್ನು ಯಾವಾಗಲೂ ವಂಚಿಸುತ್ತದೆ. ಆ ಪ್ರೀತಿಯಲ್ಲೇ ನೀನು ಬಿದ್ದುಹೋಗುತ್ತೀಯಾ ಅದರಿಂದ ಸೋತುಹೋಗುತ್ತೀಯಾ ಎಂದು ದುರಾತ್ಮನು ತಿಳಿದುಕೊಂಡಿದ್ದಾನೆ.

ಈ ಲೋಕದ ಪಾಪವನ್ನೆಲ್ಲಾ ಜಯಿಸಲು ನಿನ್ನ ನಡತೆಯನ್ನು ಶುದ್ಧಪಡಿಸಿಕೊಂಡು ಜೀವಿಸಲು ಸತ್ಯವೇದದ ವಾಕ್ಯಗಳನ್ನು ಓದಲು ಕಲಿತಿಕೋ.

"ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ. ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು. (ಫಿಲಿಪ್ಪಿ 4:9)

ಪ್ರೀಯ ದೇವರ ಮಗುವೇ ನೀನು ಲೋಕವನ್ನು ಹಿಂಬಾಲಿಸುವುದಾದರೆ ನಿನ್ನಲ್ಲಿ ದೇವರ ಭಯಭಕ್ತಿ ಕಂಡು ಬರಲು ಸಾಧ್ಯವಿಲ್ಲ. ಈ ಲೋಕ ನಿನಗೆ ಕಲಿಸಿಕೊಡುವುದು ಪಾಪವೇ ಹೊರತು ಒಳ್ಳೇಯ ಜೀವನವನ್ನು ನಿನಗೆ ಕಲಿಸಿಕೊಡುವುದಿಲ್ಲ, ಆದರೆ ಕ್ರಿಸ್ತನ ಪ್ರೀತಿ ನಿನ್ನಲ್ಲಿ ಬರುವುದಾದರೆ ಪಾಪವನ್ನು ನೀನು ದ್ವೇಷಿಸಿ ಪರಿಶುದ್ಧತೆಯ ಜೀವನವನ್ನು ಬೆಳೆಸಿಕೊಳ್ಳಲು ಯಾವಾಗಲೂ ಸಾಧ್ಯವಾಗುತ್ತದೆ. ಅನೇಕರು ಪ್ರಪಂಚ ತೋರಿಸುವ ಆಶಾಪಾಶಗಳಿಗೆ ಸಿಲುಕಿಕೊಂಡು ಅದರಿಂದ ಬಿಡಿಸಿಕೊಳ್ಳಲು ಆಗದೇ ಸೋತುಹೋಗಿ ಜೀವನವನ್ನು ಹಾಳುಮಾಡಿಕೊಳ್ಳುತ್ತಾರೆ. ಕುಟುಂಬವನ್ನು ದೂರಮಾಡಿಕೊಳ್ಳುತ್ತಾರೆ, ಕೆಟ್ಟ ಚಟಗಳಿಗೆ ಒಳಗಾಗುತ್ತಾರೆ, ಜೀವನವೇ ಜಿಗುಪ್ಸೆಯಾಗಿ ಒಂಟಿಯಾಗಿ ಅಲೆದಾಡಿ ಕೊನೆಗೆ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ, ಅವರಿಗೆ ಗೊತ್ತಿಲ್ಲ ಎಲ್ಲಾ ಸನ್ನಿವೇಷಗಳಲ್ಲೂ ಯೇಸುಕ್ರಿಸ್ತನು ನಮಗೆ ಜಯಕೊಡಲು ಶಕ್ತನು ಎಂದು. ಅದನ್ನು ಅವರು ನಂಬದೇ ದುರಾತ್ಮನು ಕೊಡುವ ಈ ಶೋಧನೆಯಲ್ಲಿ ಬಿದ್ದು ದೇವರ ಭಯಭಕ್ತಿಯನ್ನು ಕಳೆದುಕೊಳ್ಳುತ್ತಾರೆ.

ನೀನಾದರೋ ಹಾಗೆ ಆಗದೆ ಪೌಲನ ಪತ್ರಿಕೆಗಳನ್ನು ಓದಿ ಕಲಿತುಕೊಳ್ಳಬೇಕಾಗಿರುವುದನ್ನೆಲ್ಲಾ ಕಲಿತುಕೊಳ್ಳಲು ನಿನ್ನ ಸಮಯವನ್ನು ಮನಸ್ಸನ್ನು ಒಪ್ಪಿಸಿಕೊಡು.

ನಮ್ಮ ಜನರು ಸತ್ಕ್ರಿಯಾ ಹೀನರಾಗದಂತೆ ಅವರೂ ಸಹೋದರರಿಗೆ ಬೇಕಾದದ್ದನ್ನು ಕೊಡುವವರಾಗಿ ಪರೋಪಕಾರವನ್ನು ಕಲಿತುಕೊಳ್ಳಲಿ.( ತೀತ 3:15)

ಕೆಲವರು ಕ್ರಿಸ್ತನ ಕಡೆಗೆ ನೋಡುವದೂ ಇಲ್ಲ; ಕ್ರಿಸ್ತನು ಮಾಡಿರುವ ಉಪಕಾರಗಳನ್ನು ನೆನಸುವುದೂ ಇಲ್ಲ, ಇಷ್ಟ ಬಂದ ರೀತಿಯಲ್ಲಿ ಜೀವನವನ್ನು ನಡೆಸುತ್ತಾರೆ, ನೀನು ಶೋಧನೆ ತುಂಬಿದ ಪ್ರಪಂಚದಲ್ಲಿ ಜೀವಿಸುತ್ತಿದ್ದೀಯಾ! ಕಣ್ಣಿನಾಶೆ ಶರೀರದಾಶೆ, ಬದುಕು ಬಾಳಿನ ಡಂಬ ನಿನ್ನ

ಮೇಲೆ ಪ್ರತಿದಿನವೂ ಬಲವಾಗಿ ಕಾರ್ಯ ನಡೆಸುತ್ತಿರುತ್ತದೆ. ನಿನ್ನ ಮೇಲೆ ಕ್ಷಣ-ಕ್ಷಣದಲ್ಲೂ ಹೊಂಚುಹಾಕುತ್ತಿರುತ್ತದೆ. ಒಂದು ವೇಳೆ ನೀನು ಶೋಧನೆಯಲ್ಲಿ ಬಿದ್ದುಬಿಟ್ಟರೆ ಮನಸ್ಸಾಕ್ಷಿ ಬಾಧಿಸಲು ಶುರುವಾಗುತ್ತದೆ. ಆಗ ನಿನ್ನಲ್ಲಿ ಉತ್ಸಾಹ ಹೊರಟುಹೋಗುತ್ತದೆ.

ಎಲ್ಲಿ ಹೋದರೂ, ಯಾರ ಜೊತೆಯಲ್ಲಿ ಇದ್ದರೂ, ಎಷ್ಟು ಸಿನಿಮಾ ನೋಡಿದರೂ. ದಿನವೆಲ್ಲಾ ಫೇಸ್ಬುಕ್‌ನಲ್ಲಿ ಸಮಯ ಕಳೆಯುವುದಾದರೂ, ಮೊಬೈಲ್ ಹತ್ತಿರವಿದ್ದರೂ ಪ್ರಯೋಜನವಿಲ್ಲದೆ, ಬೇಸರವಾಗಿ ಜೀವನ ಕಳೆಯುವ ಮನೋವ್ಯಥೆ ಉಂಟಾಗಿ ನಿನ್ನ ಶರೀರದಲ್ಲಿ ದೌರ್ಬಲ್ಯ ಉಂಟಾಗುವದು.

ಇವೆಲ್ಲವನ್ನು ನೀನು ಬಿಟ್ಟುಬಿಟ್ಟು ಕ್ರಿಸ್ತನ ಮುಖ ನೋಡು, ಆಗ ನಿನ್ನಲ್ಲಿ ಬೆಳಕು ಬರುತ್ತದೆ. ನೀನು ಎಲ್ಲಾ ತರಹದ ಕ್ರಿಸ್ತನ ಸತ್ಕ್ರಿಯಗಳನ್ನು ಕಲಿತುಕೊಳ್ಳುತ್ತಿಯಾ. ನಿನ್ನ ಬಳಿ ಇರುವ ಜನರಿಗೆ **'ಪಾಪದಿಂದ ಬಿಡುಗಡೆ ಬೇಕು'** ಹಾಗೂ ಅವರಿಗೆ **'**ಕ್ರಿಸ್ತನು ಬೇಕು; ಎನ್ನುವ ಅರಿವು ಅವರಿಗೆ ಇಲ್ಲ. ಅದನ್ನು ನಿನ್ನ ಮುಖಾಂತರ ಕರ್ತನು ಕಾರ್ಯನಡೆಸಲು ಹೋಗುತ್ತಾನೆ. ಪಾಪದ ಕಾರ್ಯವನ್ನು ಬಿಟ್ಟರೇ ಮಾತ್ರ ನಿನಗೆ ಕ್ರಿಸ್ತನು ಮತ್ತು ಆತನ ಸತ್ಕ್ರಿಯೆಗಳು ಯಾವ-ಯಾವವೆಂದು ತಿಳಿದುಬರುತ್ತದೆ.

**"**ತಂದೆಯಿಂದ ಕೇಳಿ ಕಲಿತವರೆಲ್ಲರು ನನ್ನ ಬಳಿಗೆ ಬರುತ್ತಾರೆ.**"** (ಯೋಹಾನ 6:45)

ಪ್ರಿಯ ದೇವರ ಮಗುವೇ ಯೇಸುಕ್ರಿಸ್ತನೂ ನಮ್ಮಂತೆ ಈ ಭೂಮಿಯಲ್ಲಿ ಜೀವಿಸಿದಾತನು. ಆತನು ಜೀವಿಸಿ ಮೂವತ್ತುಮೂರುವರೆ ವರ್ಷಗಳ ಕಾಲ ಒಳ್ಳೇ ಜೀವಿತದ ಮಾದರಿಯನ್ನು ಕಲಿಸಿಕೊಟ್ಟರು. ಆತನು ಈ ಜಗತ್ತಿನಲ್ಲಿ ಜೀವಿಸಿದ್ದರೂ ಲೋಕದ ಆಶಾಪಾಶಗಳಿಂದ ಅಶುದ್ಧನಾಗದಂತೆ ಜೀವಿಸಿದನು, ನಮ್ಮಂತೆ ಎಲ್ಲಾ ರೀತಿಯಲ್ಲೂ ಶೋಧಿಸಲ್ಪಟ್ಟರೂ ಪಾಪ ಮಾಡಲಿಲ್ಲ, **"**ನಾನು ಲೋಕವನ್ನು ಜಯಿಸಿದೆನು**"** ಎಂಬ ಕರ್ತನ ಮಾತು ನಿನ್ನನ್ನು ಉತ್ಸಾಹಪಡಿಸಲಿ.

ಚಿನ್ನವನ್ನು ಪುಟಕ್ಕೆ ಹಾಕಿ ಶೋಧಿಸಿದ ಹಾಗೆ ಶೋಧನೆಯ ವೇಳೆಗಳಲ್ಲಿ ಧೃಢವುಳ್ಳವರಾಗಿ ನಿಲ್ಲುವಂತೆ ಭಕ್ತರನ್ನು ಕರ್ತನು ಶೋಧಿಸಿ ಒಳ್ಳೇದಾಗಿ ಕಾಣಲ್ಪಡುವಂತೆ ಯೋಗ್ಯರನ್ನಾಗಿಸುವನು.

ಮೋಶೆಗೆ ಅರಣ್ಯಮಾರ್ಗದ ಜೀವನದಲ್ಲಿ ಆದ ಶೋಧನೆಗಳನ್ನು ಬಾಯಲ್ಲಿ ಸುಲಭವಾಗಿ ಹೇಳಬಹುದು, ಆದರೆ ಅವನು ಅರಣ್ಯದಲ್ಲಿ ಪಟ್ಟ ಕಷ್ಟಪಾಡುಗಳು ಎಷ್ಟೋ ಭಯಂಕರವಾಗಿದೆ, ಆದರೆ ಮೋಶೆ ತನ್ನ

ಗುರಿಯನ್ನ ಮುಟ್ಟಲೇಬೇಕು ಎನ್ನುವ ಛಲದಿಂದ ಮುಂದೆ ಸಾಗಿದ, ನಿನ್ನ ಜೀವನದಲ್ಲಿ ಇಂಥ ಒಂದು ಅರಣ್ಯವಾಸ ಇದೆಯಾ? ಚಿಂತಿಸು, ನೀನು ಸಹಿಸಲಾದರೆ ಇರುವ ಕಷ್ಟವನ್ನು ನಿನಗೆ ದೇವರು ಕೊಟ್ಟಿಲ್ಲ, ಆ ಕಷ್ಟ ದೇವರಿಂದ ಬಂದಿತೋ? ನಿನ್ನಿಂದಲೇ ಬಂದಿತೋ? ಹೇಗೆ ಬರುವುದಾದರೂ ನೀನು ಶೋಧನೆಯನ್ನು ಜಯಿಸಲೇಬೇಕು.

ಮೋಶೆಯನ್ನು ಗಮನಿಸುವಾಗ, ತನ್ನ ಜನರನ್ನ ಬಿಡಿಸುವುದಕ್ಕಾಗಿ, ತನ್ನನ್ನೇ ದೇವರಿಗೆ ಅರ್ಪಿಸಿದ, ಅವನ ಹಾಗೆ ಕರ್ತನಲ್ಲಿ ನೀನು ಬೆಳೆದು ಬರಬೇಕು, ಮೋಶೆ ಕರ್ತನೊಟ್ಟಿಗೆ ಇರಲು ಪ್ರಯಾಸಪಟ್ಟು ಅನೇಕ ಕಾರ್ಯಗಳನ್ನು ಕಲಿತುಕೊಂಡನು. ಮತ್ತೊಬ್ಬರಿಗೆ ಕಲಿತಿಕೋ ಎಂದು ಉಪದೇಶ ಮಾಡಲು ಎದ್ದು ನಿಂತನು. ಅದೇ ರೀತಿ ನೀನು ಆಗಬೇಕು ಎಂದು ಕರ್ತನು ಬಯಸುತ್ತಾನೆ.

ಪ್ರಿಯ ದೇವರ ಮಗುವೇ, ಶೋಧನೆಗೆ ಸಿಕ್ಕಿಕೊಳ್ಳುವಾಗ ತಂದೆಯಿಂದ ಕೇಳಿ ಕಲಿತುಕೊಳ್ಳುವುದನ್ನು ಮರೆಯಬೇಡ, ಇಕ್ಕಟ್ಟು ಬಂದಾಗ ನೀನು ಯಾವಕಾರಣಕ್ಕೂ ಗುಣುಗುಟ್ಟಬೇಡ, ಕಣ್ಣೀರು ಬಂದಾಗ ನಿನ್ನ ಪಕ್ಕದಲ್ಲಿರುವ ವ್ಯಕ್ತಿಗೆ ಹಂಚಿಕೊಳ್ಳುವುದಕ್ಕಿಂತ ಮೊದಲು ನಿನ್ನ ಬಳಿಯಲ್ಲೇ ಇರುವ ಕರ್ತನಿಗೆ ಹಂಚಿಕೊಳ್ಳುವುದನ್ನು ಕಲಿತುಕೋ. ನಿನ್ನ ಎಲ್ಲಾ ನೋವುಗಳನ್ನು ಕರ್ತನ ಮುಂದೆ ಒಂದೂ ಮರೆಮಾಚದೇ ಹೇಳು. ಕಷ್ಟದ ಸಮಯಗಳಲ್ಲಿ ನಿನ್ನ ದೃಷ್ಟಿ ಕರ್ತನ ಕಡೆಗಿರಲಿ, ಸತ್ಯವೇದ ವಾಕ್ಯಗಳು ನಿನ್ನ ಮನಸ್ಸಿಗೆ ನೆನಪಾಗಲಿ, ನಿನ್ನ ಬಾಯಿ ಸ್ತುತಿ-ಸ್ತೋತ್ರವನ್ನು ಆರಂಭಿಸಲಿ, ಆಗ ಕರ್ತನು ಮೋಶೆ ಸಂಗಡ ಇದ್ದ ಹಾಗೆ ನಿನ್ನೊಂದಿಗೆ ಇದ್ದು ನಿನ್ನನ್ನು ಸಂತೈಸಿ ಎಲ್ಲವನ್ನು ಜಯಿಸಲು ಬಲಕೊಡುತ್ತಾನೆ.

ನಾನಂತು ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೇನೆ. (ಫಿಲಿಪ್ಪಿ 4:11)

ಪೌಲನು ತಾನು ಇದ್ದ ಸ್ಥಿತಿಯಲ್ಲಿ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದನು. ಹಾಗಾದರೆ ಯೇಸುಕ್ರಿಸ್ತನ ಮಗುವಾದ ನೀನು ಸಹ ಈಗ ನಿನ್ನ ಸ್ಥಿತಿ ಹೇಗಿದೆಯೋ ಆ ಸ್ಥಿತಿಯಲ್ಲಿ ನೀನು ತೃಪ್ತಿಯನ್ನು ಹೊಂದಿಕೊಳ್ಳುವುದನ್ನು ಕಲಿತುಕೊಳ್ಳಬೇಕಾಗಿದೆ. ಮನುಷ್ಯನಿಗೆ ಬೇಕು-ಬೇಕು ಎಂಬ ಮಾತು ಹೆಚ್ಚಾಗಿ ಬರುತ್ತದೆಯೇ ವಿನಹ ಸಾಕು-ಸಾಕು ಎಂದು ಬರುವುದು ಎಷ್ಟೋ ಕಷ್ಟ.

ಪ್ರಿಯ ದೇವರ ಮಗುವೇ, ನೀನು ತಂದೆಯ ಮಾತನ್ನು ಕೇಳಿ ಕಲಿತುಕೊಳ್ಳಬೇಕಾಗಿರುವದನ್ನು ಕಲಿತುಕೋ. ಯೇಸುಕ್ರಿಸ್ತನ ಹತ್ತಿರ

ವಾಕ್ಯಗಳನ್ನು ಕಲಿತುಕೋ. ಪೌಲನ ಹಾಗೆ ಸಂತುಷ್ಟನಾಗಿರುವುದನ್ನು ಕಲಿತುಕೋ, ಮೋಶೆಯ ಹಾಗೆ ಶೋಧನೆಗಳನ್ನು ಗೆಲ್ಲುವುದನ್ನು ಕಲಿತುಕೋ, ವಾಕ್ಯದ ಅಡಿಪಾಯದಲ್ಲಿ ನಿನ್ನನ್ನು ತಗ್ಗಿಸಿಕೊಂಡು ಪಾಪದಿಂದ ಬಿಡುಗಡೆಯನ್ನು ಹೊಂದಿಕೊಳ್ಳಲು ಕಲಿತುಕೋ. ಆಗ ನೋಡು 'ನಿನ್ನ ಹಾಗೆ ಯಾರೂ ಇಲ್ಲ' ಎಂದು ನಿನ್ನ ಮನಸ್ಸೇ ನಿನಗೆ ಸಾಕ್ಷಿ ಕೊಡುತ್ತದೆ. ಕಲಿಸುವುದು ಸುಲಭ ಕಲಿಯುವುದು ಕಷ್ಟ.

ಪ್ರಿಯ ದೇವರ ಮಗುವೇ, ಸಾಯುವವರೆಗೂ ಕ್ರಿಸ್ತನಲ್ಲಿ ಕಲಿಯುವ ಪಾಠಗಳು ಇದ್ದೇ ಇರುತ್ತದೆ. ನೀನು ಎಷ್ಟೇ ಭಾರಿ ಸತ್ಯವೇದವನ್ನು ಓದುವುದಾದರೂ ಸತ್ಯವೇದವು ನಿನಗೆ ಹೊಸ-ಹೊಸದನ್ನು ಕಲಿಸುತ್ತಲೇ ಇರುತ್ತದೆ. ನಿನ್ನ ಜೀವನದ ಅಂತ್ಯದಿನದವರೆಗೂ ನಿನಗೆ ಸತ್ಯವೇದದ ಅವಶ್ಯಕತೆ ಇದ್ದೇ ಇರುತ್ತದೆ ಎಂದು ಮರೆಯಬೇಡ.

# 5. ಅಧೀನವಾಗು

"ಮರಗಳು ತಮಗೋಸ್ಕರ ಒಬ್ಬ ಅರಸನನ್ನು ಅಭಿಷೇಕಿಸಬೇಕೆಂದು ಹೊರಟು ಎಣ್ಣೆಯ ಮರದ ಬಳಿಗೆ ಬಂದು–ನೀನು ಬಂದು ನಮಗೆ ಅರಸನಾಗು ಅಂದವು. ಆಗ ಅದು ಅವುಗಳಿಗೆ–ನನ್ನಲ್ಲಿರುವ ಎಣ್ಣೆಗೋಸ್ಕರ ದೇವತೆಗಳೂ ಮನುಷ್ಯರೂ ನನ್ನನ್ನು ಘನಪಡಿಸುತ್ತಾರೆ: ಇದನ್ನು ಬಿಟ್ಟು ಮರಗಳ ಮೇಲೆ ಓಲಾಡುವದಕ್ಕೆ ಬರಬೇಕೋ" ಅಂದಿತು. ತರುವಾಯ ಅವು ಅಂಜೂರ ಗಿಡದ ಬಳಿಗೆ ಹೋಗಿ ಅದಕ್ಕೆ – ನೀವು ಬಂದು ನಮ್ಮ ಅರಸನಾಗು ಅನ್ನಲು. ಅದು –ನಾನು ಶ್ರೇಷ್ಠವಾದ ಮಧುರಫಲದಾನವನ್ನು ಬಿಟ್ಟು ಮರಗಳ ಮೇಲೆ ಓಲಾಡುವದಕ್ಕೆ ಬರಬೇಕೋ ಅಂದಿತು. ಅನಂತರವು ದ್ರಾಕ್ಷಾಲತೆಯ ಬಳಿಗೆ ಹೋಗಿ– ನೀನು ಬಂದು ನಮ್ಮ ಅರಸನಾಗು ಎನ್ನಲು ಅದು ಅವುಗಳಿಗೆ– ನಾನು ನನ್ನ ರಸದಿಂದ ದೇವತೆಗಳಿಗೂ ಮನುಷ್ಯರಿಗೂ ಆನಂದಕೊಡುವದನ್ನು ಬಿಟ್ಟು ಮರಗಳ ಮೇಲೆ ಓಲಾಡುವದಕ್ಕೆ ಬರಬೇಕೋ ಅಂದಿತು. ಕಡೆಗೆ ಎಲ್ಲಾ ಮರಗಳು ಮುಳ್ಳುಗಿಡದ ಬಳಿಗೆ ಹೋಗಿ – ನೀನು ಬಂದು ನಮ್ಮ ಅರಸನಾಗು ಅನ್ನಲು ಅದು – ನೀವು ಯಥಾರ್ಥಮನಸ್ಸಿನಿಂದ ನನಗೆ ರಾಜ್ಯಾಭಿಷೇಕ ಮಾಡಬೇಕೆಂದಿರುವುದಾದರೆ ಬಂದು ನನ್ನ ನೆರಳನ್ನು ಆಶ್ರಯಿಸಿಕೊಳ್ಳಿರಿ; ಇಲ್ಲವಾದರೆ ನನ್ನಿಂದ ಬೆಂಕಿಹೊರಟು ಲೆಬನೋನಿನ ದೇವದಾರುವೃಕ್ಷಗಳನ್ನು ದಹಿಸಿಬಿಡುವದು ಎಂದಿತು" (ನ್ಯಾಯಸ್ಥಾಪಕರು 9: 7–15)

ಈ ಸಣ್ಣ ಕಥೆಯನ್ನು ಗಮನಿಸಿರಿ: ಮರಗಳು ತಮಗೆ ಯಾರು ನಾಯಕರಾಗಿರಬೇಕು? ಯಾರು ಅಧಿಕಾರಿಯಾಗಿರಬೇಕು ತಾವು ಯಾರ ಅಧೀನದಲ್ಲಿರಬೇಕು ಎಂದು ತಿಳಿಯದೆ ಉತ್ತಮವಾದ ಎಣ್ಣೆ ಮರವನ್ನು ಅತ್ಯುತ್ತಮವಾದ ಅಂಜೂರದ ಮರವನ್ನು ಮತ್ತು ದ್ರಾಕ್ಷೆ ಮರವನ್ನು ಬಿಟ್ಟು ಮುಳ್ಳುಗಿಡಗಳ ಆಶ್ರಯಕ್ಕೆ ಹೋಗುತ್ತಿರುವುದು ಹಾಸ್ಯಸ್ಪದವಾಗಿದೆ ಅಲ್ಲವೇ. ಮುಳ್ಳುಗಿಡಗಳ ಆಶ್ರಯದಲ್ಲಿ ಮುಳ್ಳು ಹೊರತು ಪಡಿಸಿ ಬೇರೇನು ಸಿಕ್ಕುವುದಕ್ಕೆ ಸಾಧ್ಯವಿದೆ? ಸ್ವಲ್ಪ ಯೋಚಿಸಿರಿ. ಮರಗಳು ಎಷ್ಟು ತಪ್ಪು ಮಾಡಿತಲ್ಲವೇ, ಮರಗಳಿಗೆ ಸ್ವಾತಂತ್ರ್ಯವಿದ್ದರೂ ತಮ್ಮ ಸ್ವಾತಂತ್ರ್ಯದಿಂದ ಮುಳ್ಳುಗಿಡಕ್ಕೆ ತಮ್ಮ ಮೇಲೆ ಅಧಿಕಾರಕೊಡುತ್ತಿದೆ. ಈ ವಿಚಾರಕ್ಕೆ ನಗಬೇಕೋ ಅಳಬೇಕೋ ನೀವೇ ಯೋಚಿಸಿರಿ. ಈ ಸಣ್ಣ ಕಥೆಯ ರೀತಿಯಲ್ಲಿಯೇ ಎಷ್ಟೋ ಭಾರಿ ನೀನು ನಿನ್ನ ಮೇಲೆ ಅಧಿಕಾರಿಯಾಗಿರುವುದಕ್ಕೆ ಕೆಲವರನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭ ಬರುತ್ತದೆ ಆಗ ನಿನ್ನ ಇಷ್ಟ ಏನು? ನಿನ್ನ ಆಯ್ಕೆ ಏನಾಗಿದೆ?

ಎಣ್ಣೆಮರವೋ? ಅಂಜೂರದಮರವೋ? ದ್ರಾಕ್ಷೆಮರವೋ? ಅಥವಾ ಮುಳ್ಳುಗಿಡವೋ? ಏನಾಗಿದೆ ನಿನ್ನ ಆಯ್ಕೆ. ಪ್ರಿಯ ದೇವರ ಮಗುವೇ ನೀನು ಲೆಬನೋನಿನ ದೇವದಾರು ವೃಕ್ಷವಾಗಿದ್ದೀಯಾ ಎಂದು ತಿಳಿದುಕೋ. ಆಗ ನಿನ್ನ ಆಯ್ಕೆ ಯಾವುದಾಗಿರಬೇಕು ಎಂದು ನಿನಗೆ ತಿಳಿಯುತ್ತದೆ.

ಪ್ರಿಯ ದೇವರ ಮಗುವೇ, ನಿನ್ನ ಮನೆಯ ಹೊರಗೂ, ಮನೆಯ ಒಳಗೂ ಒಂದೊಂದು ಅಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳಲು ಕರ್ತನು ನಿನಗಾಗಿ ಕೆಲವೊಂದು ವ್ಯಕ್ತಿಗಳನ್ನು ನಿನ್ನ ಮುಂದೆ ತರುತ್ತಾನೆ. ಈ ಹೊತ್ತು ನಿನ್ನ ಆಯ್ಕೆಯ ಮೇಲೆಯೇ ನಿನ್ನ ಜೀವನ ನಡೆಯುತ್ತಿದೆ. 'ಒಳ್ಳೆಯದು ಮತ್ತು ಕೆಟ್ಟದ್ದು' 'ಬೆಳಕು ಮತ್ತು ಕತ್ತಲು' 'ಉತ್ತಮ ಮತ್ತು ಹೀನ' ಎಂದು ಯಾವಾಗಲೂ ಈ ಲೋಕದಲ್ಲಿ 2 ಆಯ್ಕೆ ನಿನ್ನ ಮುಂದೆ ಬರುತ್ತಲೇ ಇರುತ್ತದೆ. ನಿನ್ನ ಆಯ್ಕೆ ಮುಳ್ಳಾಗಿದ್ದರೆ ನಿನ್ನ ಜೀವನವೆಲ್ಲಾ ನಿನಗೆ ಕಣ್ಣೀರು ತಪ್ಪಿದ್ದಿಲ್ಲ. ನಿನ್ನ ಮೇಲೆ ನಿನಗೆ ಯಾರು ಅಧಿಕಾರಿಯಾಗಿರಬೇಕು ಎಂದು ಕರ್ತನು ನಿನಗೆ ಕೊಟ್ಟಿರುವ ಸ್ವಾತಂತ್ರ್ಯದಿಂದ ಉತ್ತಮವಾಗಿ ಆಯ್ಕೆ ಮಾಡಿಕೊಳ್ಳಲೇಬೇಕು.

ದೇವರು ನಿನಗಾಗಿ ಕೆಲವೊಬ್ಬರನ್ನು ನಿನ್ನ ಮೇಲಿನ ಅಧಿಕಾರಿಯಾಗಿ ಮೊದಲೇ ನೇಮಕಮಾಡಿರುತ್ತಾನೆ. ನೀನು ಬೆಳೆಯುತ್ತಾ ನೀನೇ ಕೆಲವೊಬ್ಬರನ್ನು ಆಯ್ಕೆಮಾಡಿಕೊಳ್ಳುವಂತೆ ಮಾಡುತ್ತಾನೆ. ದೇವರಿಂದ ಆಯ್ಕೆಯಾದ ವ್ಯಕ್ತಿಗಳು ಎಣ್ಣೆಯ ಮರದ ಹಾಗೆಯೂ, ಅಂಜೂರದ ಮರದ ಹಾಗೆಯೂ, ದ್ರಾಕ್ಷೆಯ ಮರದ ಹಾಗೆಯೂ ನಿನಗೆ ಯಾವಾಗಲೂ ಸಂತೋಷವನ್ನು ಕೊಡುತ್ತಿರುತ್ತಾರೆ. ಆದರೆ ನಿನಗೆ ನೀನು ಆಯ್ಕೆ ಮಾಡಿಕೊಳ್ಳುವ ವಿಚಾರದಲ್ಲಿ ನೀನು ಬುದ್ಧಿ ಉಪಯೋಗಿಸಲೇ ಬೇಕು. ಇಲ್ಲದಿದ್ದರೆ ತುಂಬಾ ಕಷ್ಟಪಡಬೇಕಾಗುತ್ತದೆ.

ಒಂದು ವ್ಯಕ್ತಿಗೆ ಸಾಯುವವರೆಗೂ ಅನೇಕ ಅಧಿಕಾರಗಳು ಇದ್ದೇ ಇರುತ್ತಾರೆ. ನೀನು ಯಾರ ಮಾತನ್ನು ಕೇಳಬೇಕೋ ತೀರ್ಮಾನಿಸಿಕೋ ಮುಳ್ಳಿನ ಮಾತು ಕೇಳಿದರೆ ಮುಳ್ಳೇ ಸಿಗುತ್ತದೆ ಎಂದು ಅರ್ಥಮಾಡಿಕೊಂಡು, ಯಾರ ಮಾತು ಕೇಳಬೇಕು ಎಂದು ನೀನು ಬಹು ಜಾಗ್ರತೆಯಿಂದ ಆಯ್ಕೆ ಮಾಡಿಕೋ.

ನಿನ್ನ ಮೇಲೆ ಅಧಿಕಾರ ನಡೆಸಲು ಕೆಲವೊಬ್ಬರನ್ನು ನೀನೇ ಆಯ್ಕೆ ಮಾಡಿಕೊಳ್ಳಬೇಕಾಗಿರುವುದರಿಂದ ಸರಿಯಾದ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಲು ಯೇಸುಕ್ರಿಸ್ತನ ಸಹಾಯವನ್ನು ಪಡೆದುಕೋ. ಈಗಾಗಲೇ ಅನೇಕ ವ್ಯಕ್ತಿಗಳ ಕೆಳಗೆ ಅನಾವಶ್ಯಕವಾಗಿ ನಿನ್ನನ್ನು ತಗ್ಗಿಸಿಕೊಂಡು ಮುಳ್ಳಿನ ಆಶ್ರಯವನ್ನು ಪಡೆದ ಹಾಗೆ ನೀನು ತೊಂದರೆಗೆ ಒಳಗಾಗಿರುತ್ತೀಯಾ. ಇನ್ನು

ಮುಂದೆ ಆದರೂ ನಿನ್ನ ಆಯ್ಕೆಗೆ ಯೇಸುಕ್ರಿಸ್ತನು ಸಹಾಯ ಮಾಡಲೆಂದು ಪ್ರಾರ್ಥಿಸಿಕೋ.

**ಯೇಸುಕ್ರಿಸ್ತನಿಂದ ಆಯ್ಕೆಯಾದ ನಾಯಕರು :**

ಇಲ್ಲಿ ನಿಮ್ಮ ಆತ್ಮಕ್ಕೆ ಒಂದು ಉತ್ತಮ ನಾಯಕನನ್ನು ನಿಮಗೆ ಪರಿಚಯ ಪಡಿಸುತ್ತೇನೆ. ನಿಮ್ಮ ಆತ್ಮದ ನಾಯಕರಾದರೋ ದೇವರಿಂದಲೇ ನಿನ್ನ ಮೇಲೆ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ ಎಂದು ನೀನು ಮರೆಯಲೇಬಾರದು.

"ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ, ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ. (ಇಬ್ರಿ 13:17)

ಪ್ರತಿಯೊಬ್ಬರು ಈ ಲೋಕದಲ್ಲಿರುವ ಅಧಿಕಾರಿಗಳಿಗೆ ಅಧೀನವಾಗಿರಲು ಚೆನ್ನಾಗಿ ಬಲ್ಲಾತರಾಗಿರುತ್ತಾರೆ. ಇವರು ತುಂಬಾ ಪೋಲೈಟ್ ಆಗಿರುತ್ತಾರೆ ಎಂದು ಎಲ್ಲರ ಬಾಯಿಂದ ಹೇಳಿಸಿಕೊಂಡು ಹೆಮ್ಮೆ ಪಡುತ್ತಿರುತ್ತಾರೆ. ಮನೆಯಲ್ಲಿ ತಮ್ಮ ಮೇಲೆ ಇರುವ ನಾಯಕರುಗಳನ್ನು ಗೌರವಿಸುತ್ತಿರುತ್ತಾರೆ. ಕೆಲಸದಲ್ಲಿಯೂ ಗೌರವಿಸುವುದರಲ್ಲಿ ಮುಂದಾಗಿರುತ್ತಾರೆ. ಒಂದು ಅಂಗಡಿಗೆ ಹೋಗಿ ಸರಕುಗಳನ್ನು ತೆಗೆದುಕೊಂಡು ಬರುವಾಗಲು ಅಂಗಡಿ ಮಾಲಿಕನಿಗೆ ವಿಧೇಯವಾಗಿ ನಡೆದುಕೊಳ್ಳುತ್ತಾರೆ. ಎಲ್ಲೂ ಅಹಂಕಾರವಾಗಿ ವರ್ತಿಸುವುದಿಲ್ಲ. ಆದರೆ ಅದೇ ವ್ಯಕ್ತಿ ದೇವರ ಮಗುವಾಗಿ ಮಾರ್ಪಡುವಾಗ ಸಭೆಗೆ ಬರುವಾಗ ತಮ್ಮ ಸ್ಥಾನ–ಮಾನಗಳ ಬಗ್ಗೆ ಚಿಂತಿಸಿ ಮಾತನಾಡುತ್ತಾನೆ. ಇದು ಎಷ್ಟು ತಪ್ಪಾದ ಕಾರ್ಯವಾಗಿದೆ. ಎಂದು ನೀನೇ ಒಂದು ಭಾರಿ ಯೋಚಿಸು.

ಬಸ್‌ಗಳಲ್ಲಿರುವ ಕಂಡಕ್ಟರ್ ಅಥವಾ ಡ್ರೈವರ್‌ಗೆ ವಿರೋಧವಾಗಿ ಮಾತನಾಡಿದರೆ ಏನಾಗುತ್ತೆ! ಅಲ್ಲೇ ಬಸ್‌ಅನ್ನು ನಿಲ್ಲಿಸಿ ಹೊರಹಾಕುತ್ತಾರೆ ಅಲ್ಲವೇ. ನೋಡಿ ಮನುಷ್ಯನು ಈ ಲೋಕದಲ್ಲಿ ಕಣ್ಣಿಗೆ ಬೀಳುವ ಅಧಿಕಾರಿಗಳಿಗೆಲ್ಲಾ ಅಧೀನವಾಗಲು ಬಲ್ಲಾತರಾಗಿದ್ದರೂ ಯೇಸುಕ್ರಿಸ್ತನಿಂದ ನೇಮಕವಾದ ಅಧಿಕಾರಿಗೆ ವಿಧೇಯರಾಗಲು ತಿಳಿಯದವರಾಗಿ ಮೂರ್ಖರಾಗಿ ಜೀವಿಸುವ ವಿಶ್ವಾಸಿಗಳಾಗಿರುತ್ತಾರೆ. ನೀನಾದರೋ ಅಂತಹ ವ್ಯಕ್ತಿಯಾಗಿರಬಾರದು. ನಿನ್ನ ಮೇಲೆ ಕರ್ತನು ನೇಮಕ ಮಾಡಿರುವವರಿಗೆ

ನೀನು ಖಂಡಿತವಾಗಿ ಅಧೀನವಾಗಲೇ ಬೇಕು, ನಿನ್ನನ್ನು ನೀನು ತಗ್ಗಿಸಿಕೊಳ್ಳಲೇ ಬೇಕು. ಆಗಲೇ ನಿನಗೆ ಆಶೀರ್ವಾದ.

ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ; ಯಾಕೆಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ; ಈ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟವರು ಆದಕಾರಣ ನೀವು ಸಭಾನಾಯಕರ ಮಾತನ್ನು ಕೇಳಬೇಕು ಯಾಕೆಂದರೆ ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿರುವುದರಿಂದ ಇಂತವುಗಳನ್ನೇ ಕಲಿಸಲು ನಿಮ್ಮ ಸಭಾನಾಯಕರು ಆಯ್ಕೆಯಾಗಿರುವುದರಿಂದ ನೀವು ಅವರಿಗೆ ಅಧೀನರಾಗಿರಿ.

ನಿಮಗೆ ಒಳ್ಳೇ ಮಾರ್ಗದ ಬೋಧನೆ ತಿಳಿಸಿ, ವಾಕ್ಯದ ರಹಸ್ಯಗಳನ್ನು ತಿಳಿಸಿ, ಕರ್ತನಿಗೆ ಹತ್ತಿರವಾಗಿ ನಿಮ್ಮನ್ನು ನಡೆಸುವವರು ನಿಮ್ಮ ಬೋಧಕರ ಕೆಲಸವಾಗಿದೆ. ಯೇಸು ನಮ್ಮ ಒಳ್ಳೆಯ ಕುರುಬನಾಗಿರುವ ಪ್ರಕಾರ ಸಭೆಯನ್ನು ನಡೆಸಲು, ಪರಲೋಕರಾಜ್ಯದ ಹತ್ತಿರ ನಿನ್ನನ್ನು ಬೆಳೆಸಲು ಬೋಧಕರನ್ನ ನೇಮಿಸಿದ್ದಾರೆ, ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ.

ನೀನು ಕರ್ತನ ದೃಷ್ಟಿಯಲ್ಲಿ ಉತ್ತಮವಾಗಿಯೂ ಮೆಚ್ಚಿಗೆಯಾಗಿಯೂ ಇರಬೇಕೆಂದು ಬಯಸುವ ವ್ಯಕ್ತಿಯಾಗಿದ್ದಾರೆ, ಮನುಷ್ಯರ ಕಣ್ಣುಗಳು ನಿನ್ನನ್ನು ತಪ್ಪಾಗಿ ಕಾಣುತ್ತಿದೆಯಲ್ಲಾ ಎಂದು ಚಿಂತಿಸಬಾರದು, ಯಾಕೆಂದರೆ ಈ ಲೋಕದಲ್ಲಿ ನಿನಗಿರುವ ಸ್ಥಾನ ದೊಡ್ಡದಾಗಿ ನಿನಗೆ ಕಾಣಿಸುವಾಗ ನಿಮ್ಮ ಸಭಾನಾಯಕರ ಸ್ಥಾನ ನಿನಗೆ ಕಡಿಮೆಯಾಗಿ ಕಾಣಿಸುತ್ತದೆ. ಆಗ ಅವರಿಗೆ ಬೊಗ್ಗಿ ನಡೆದುಕೊಳ್ಳಲು ನಿನ್ನ ಮನಸ್ಸಿಗೆ ಕಷ್ಟವಾಗುತ್ತದೆ. ನಿನ್ನ ಸ್ಥಾನಕ್ಕಿಂತ ನಿನ್ನ ಬೋಧಕರ ಸ್ಥಾನ ದೊಡ್ಡದೆಂದು ನಿನಗೆ ಅರ್ಥವಾದಾಗ ಮಾತ್ರ ಮನುಷ್ಯನು ಏನೆಂದು ಕೊಳ್ಳುತ್ತಾನೆ ಎಂದು ನೀನು ಯಾವ ಕಾರಣಕ್ಕೂ ಚಿಂತಿಸದೆ ನಿನ್ನ ಬೋಧಕನಿಗೆ ಅಧೀನವಾಗಿ ನಡೆಯಲು ಸಾದ್ಯ.

ನಿಮ್ಮ ಬೋಧಕರು ಒಳ್ಳೇಯದನ್ನೇ ತಿಳಿಸಿ, ನೀತಿಮಾರ್ಗದಲ್ಲಿ ನಡೆಸಲು ಪವಿತ್ರಾತ್ಮನ ಸಹಾಯದಿಂದ ಪ್ರಯಾಸ ಪಡುತ್ತಿರುತ್ತಾರೆ ಅಲ್ಲವೇ, ಅವರು ನಿನ್ನನ್ನು ಗದರಿಸುವಾಗ ನೀನು ಗುಣುಗುಟ್ಟುವುದಾದರೆ ನಿನ್ನಲ್ಲಿ ನೀತಿವಂತಿಕೆ ಹೇಗೆ ಬೆಳೆಯುತ್ತದೆ, ಕರ್ತನ ಮುಂದೆ ನೀನು ಪರಿಶುದ್ಧವಾಗಿ ಜೀವಿಸಿ, ಒಳ್ಳೇ ಮೆಚ್ಚಿಗೆಯನ್ನು ಹೇಗೆ ನಿನ್ನಷ್ಟಕ್ಕೆ ನೀನೇ ಪಡೆದುಕೊಳ್ಳಲು ಸಾಧ್ಯವಿದೆ?

"ಶಿಕ್ಷೆಯನ್ನು ತ್ಯಜಿಸುವವನಿಗೆ ಬಡತನ ಮತ್ತು ಅವಮಾನ" ನಿನಗೆ ಬೋಧಕನ ಮಾತುಗಳು ಶಿಕ್ಷಿಸುವ ಹಾಗೆಯೇ ಕಾಣುತ್ತದೆ. ನೀನು ಬೋಧಕರ ಮಾತಿಗೆ ಅಧೀನವಾಗಿ ನಡೆಯದಿದ್ದರೆ ನಿನ್ನಲ್ಲಿ ಸಮೃದ್ಧಿ ಉಂಟಾಗಲು ಸಾಧ್ಯವಿಲ್ಲ, ನಿನಗೆ ಕ್ರಿಸ್ತನ ಮಾತುಗಳನ್ನು ಅರ್ಥಮಾಡಿಸಿ, ಆರಾಧನೆಯನ್ನು ಹೇಗೆ ಮಾಡುವುದು ಎಂದು ಕಲಿಸಿಕೊಟ್ಟು, ಸತ್ಯವೇದದಲ್ಲಿ ವಾಕ್ಯಗಳನ್ನು ಹೇಗೆ ಓದಬೇಕು ಎಂದು ತಿಳಿಸಿಕೊಡುವುದೇ ನಿನ್ನ ಮುಂದೆ ಕಾಣುವ ಬೋಧಕನ ಕರ್ತವ್ಯವಾಗಿದೆ. ನೀನು ಕಣ್ಣಿಗೆ ಕಾಣುವ ನಿನ್ನ ಬೋಧಕನಿಗೆ ವಿಧೇಯಳಾ/ನಾ/ಗದಿದ್ದರೆ ಕಾಣದೇ ಇರುವ ನನ್ನ ಯೇಸುಕ್ರಿಸ್ತನಿಗೆ ಹೇಗೆ ಅಧೀನವಾಗಿ ನಡೆದುಕೊಳ್ಳಲು ಸಾಧ್ಯ ನೀನೇ ಯೋಚಿಸು.

'ದೇವರ ವಾಕ್ಯವನ್ನು ಉಲ್ಲಂಘಿಸುವವನು ನಾಶವಾಗುವನು; ಆಜ್ಞೆಯನ್ನು ಭಯಭಕ್ತಿಯಿಂದ ಕೈಕೊಳ್ಳುವವನು ಸುಫಲವನ್ನು ಹೊಂದುವನು.'(ಜ್ಞಾನೋ 13:13) ನಿನ್ನನ್ನು ಆತ್ಮೀಕದಲ್ಲಿ ಬೆಳೆಸುವ ನಿನ್ನ ಬೋಧಕನಿಗೆ ದೇವರು ಕೊಟ್ಟಿರುವ ಪರಿಶುದ್ಧಾತ್ಮನ ಜ್ಞಾನವನ್ನು ಬಿಟ್ಟರೆ ನೀನು ಬೇರೆ ಏನನ್ನೂ ನೋಡಲೇ ಬಾರದು. ನಿನ್ನ ಬೋಧಕನ ವಯಸ್ಸು ಆಗಲಿ, ವಿದ್ಯೆಯಾಗಲಿ, ಅಂತಸ್ಥಾಗಲಿ, ನೀನು ತಿಳಿದುಕೊಳ್ಳುವ ಅವಶ್ಯಕತೆ ಇಲ್ಲ. ಯಾಕೆಂದರೆ ನೀನು ನಿನ್ನ ಬೋಧಕನನ್ನು ಹುಡುಕಿಕೊಂಡು ಬರಲಿಲ್ಲ. ನಮ್ಮ ಪ್ರಿಯ ರಕ್ಷಕನಾದ ಯೇಸುಕ್ರಿಸ್ತನು ನಿನ್ನನ್ನು ಪ್ರೀತಿಮಾಡಿ, ನೀನು ತನ್ನ ಮಗುವಾಗಿ ಜೀವಿಸಿ ಆತನ ರಾಜ್ಯಕ್ಕೆ ಬರಬೇಕೆಂಬ ಉದ್ದೇಶದಿಂದ ನಿನಗಾಗಿ ಒಂದು ಸಭೆಯನ್ನು ಮತ್ತು ನಿನ್ನನ್ನು ಪೋಷಿಸುವದಕ್ಕೆ ಒಂದು ಬೋಧಕನನ್ನು ನೇಮಿಸಿರುತ್ತಾರೆ.

ಪ್ರೀತಿಯ ದೇವರ ಮಗುವೇ, ಯಾವ ವಿಶ್ವಾಸಿಯು ಬೋಧಕನ ಮಾತನ್ನು ಕೇಳುತ್ತಾನೆ 'ಅವನ ಹಾಗೆ ಕ್ರಿಸ್ತನಿಂದ ಹೊಗಳಿಸ್ಪಡುವ ವ್ಯಕ್ತಿ ಯಾರೂ ಇರುವುದಿಲ್ಲ. ನಿನ್ನ ವಿಧೇಯತೆಯನ್ನು ಗಮನಿಸುವ ನನ್ನ ಕರ್ತನು ಎಲ್ಲರ ಬಾಯಲ್ಲಿ 'ನಿನ್ನ ಹಾಗೆ ಒಳ್ಳೇ ವಿಶ್ವಾಸಿ ಯಾರು ಇಲ್ಲ' ಎಂದು ಖಂಡಿತವಾಗಿ ಹೇಳಿಸುತ್ತಾನೆ.

ಪ್ರಿಯ ದೇವರ ಮಗುವೇ, ಸುಲಭವಾದ ಮಾರ್ಗವನ್ನು ಅನುಸರಿಸಿ ಎಂದು ನನ್ನ ಯೇಸುಕ್ರಿಸ್ತನು ಹೇಳುವುದಾದರೆ ನನಗೆ ಬೇಡ, ನನ್ನ ಇಷ್ಟದ ರೀತಿಯಲ್ಲಿ ಆಯ್ಕೆ ಮಾಡಿಕೊಂಡಿರುವ ದಾರಿಯಲ್ಲೇ ನಾನು ನಡೆಯುತ್ತಾ ಯೇಸುಕ್ರಿಸ್ತನನ್ನು ಪ್ರೀತಿಸುತ್ತೇನೆ, ನಡೆಯುತ್ತೇನೆ ಎಂದು ಹೇಳುವುದಾದರೆ ಪ್ರಯೋಜನವಿಲ್ಲ,

"ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು ಅದು ಕಟ್ಟಕಡೆಗೆ ಮರಣಮಾರ್ಗವೇ ಆಗಿದೆ" (ಜ್ಞಾನೋ 14:12) ಈ ಸಭೆ

ನನಗೆ ಬೇಡ ಈ ಪಾಸ್ಟರ್ ನನಗೆ ಬೇಡ ಎಂದು ಕೆಲವರು ತೀರ್ಮಾನ ತೆಗೆದುಕೊಳ್ಳುತ್ತಾರೆ ಅಂಥವರ ಕಡೆಯ ಸ್ಥಿತಿ ತುಂಬಾ ಹೀನಾಯವಾಗುತ್ತದೆ. ನೀನು ದೇವರ ಆಜ್ಞೆಗಳನ್ನು ಉಲ್ಲಂಘಿಸಿ ಬೋಧಕರ ಮಾತನ್ನು ಕೇಳದೇ ಹೋದರೇ ಮರಣಮಾರ್ಗವೇ ನಿನ್ನ ಅಂತ್ಯಾವಸ್ಥೆ ಆಗುತ್ತದೆ.

ನನ್ನ 'ಯೇಸುಕ್ರಿಸ್ತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು,' ನೀನು ಹೇಗೆ ಈ ಲೋಕದ ಜನರ ಮಧ್ಯದಲ್ಲಿ ಜೀವಿಸುತ್ತಾ ಕರ್ತನ ನಾಮವನ್ನು ಮಹಿಮೆ ಪಡಿಸಿ ಕರ್ತನು ನಿನ್ನ ಮೇಲೆ ನೇಮಿಸಿರುವ ಬೋಧಕರಿಗೆ ನೀನು ಅಧೀನವಾಗಿದ್ದೀಯಾ ಎಂದು ಗಮನಿಸುತ್ತಾ ಇರುತ್ತಾನೆ.

ನೀನು ಇಕ್ಕಟ್ಟಲ್ಲಿ ಇದ್ದು ಕಣ್ಣೀರು ಹಾಕುವಾಗ ನಿನ್ನ ಬಳಿಯಲ್ಲಿ ಬೋಧಕರನ್ನು ಕರ್ತನು ಕಳುಹಿಸುತ್ತಿರುವುದು ಯಾಕೆ? ಅವರು ಸಂತೈಸುವ ನಾಲಿಗೆಯಿಂದ ತುಂಬಲ್ಪಟ್ಟು ನಿನಗಾಗಿ ಕಣ್ಣೀರಿಟ್ಟು ಪ್ರಾರ್ಥಿಸುವುದು ಯಾಕೆ? ಒಮ್ಮೆ ಆಲೋಚಿಸಿರಿ. ನಿನ್ನವರೇ ನಿನಗಾಗಿ ಕಣ್ಣೀರಿಡುವುದಿಲ್ಲ! ಚಿಂತಿಸು! ಬೆಳೆಯುವ ಒಳ್ಳೇ ವೃಕ್ಷವಾಗಿ ನಿನ್ನನ್ನು ಬದಲಾಯಿಸುವ ಪ್ರಯತ್ನ ಯಾಕೆ ಪಡುತ್ತಿದ್ದಾರೆ? ಆಲೋಚಿಸಿರಿ! ಕರ್ತನು ನಿಮ್ಮ ಮೇಲೆ ಇಟ್ಟಿರುವ ತನ್ನ ಪ್ರೀತಿಯನ್ನು ಅವರ ಮೂಲಕ ನಿಮ್ಮ ಬಳಿಯಲ್ಲಿ ತೋರಿಸಿಕೊಳ್ಳುತ್ತಿದ್ದಾರೆ ಅಲ್ಲವೇ.

ಅನೇಕರ ಮುಂದೆ ಒಳ್ಳೇ ತಿಳುವಳಿಕೆಯನ್ನು ಬಿತ್ತುವ ವ್ಯಕ್ತಿಯ ಹಾಗೆ ಯೇಸುಕ್ರಿಸ್ತನು ಬೋಧಕರ ಮುಖಾಂತರ ನಿನ್ನನ್ನು ಬೆಳೆಸುತ್ತಿರುತ್ತಾರೆ ಮತ್ತು "ಖಂಡಿಸು, ಗದರಿಸು, ಎಚ್ಚರಿಸು." (2ತಿಮೊ 4:3) "ಪಾಪದಲ್ಲಿ ನಡೆಯುವವನ್ನು ಎಲ್ಲರ ಮುಂದೆಯೇ ಗದರಿಸು; ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವದು." (1ತಿಮೊ 5:20) ಎಂದು ಅವರು ಕರ್ತನಿಂದ ಅಧಿಕಾರ ಪಡೆದುಕೊಂಡಿದ್ದಾರೆ. ಆದರೆ ಕೆಲವು ವಿಶ್ವಾಸಿಗಳೋ ಬೋಧಕರಿಗೆ ದೇವರ ವಿರುದ್ಧವಾಗಿ ಬುದ್ಧಿಹೇಳಲು ಪ್ರಯತ್ನಿಸುತ್ತಾರೆ. ನೀವು ಯಾಕೆ ಎಲ್ಲರ ಮುಂದೆ ನನ್ನನ್ನು ಗದರಿಸುತ್ತೀರಾ? ನನ್ನನ್ನು ಒಂದು ಕೋಣೆಯೊಳಗೆ ಕರೆದುಕೊಂಡು ಹೋಗಿ ಎಷ್ಟು ಬೇಕಾದರೂ ಬುದ್ಧಿಹೇಳಿರಿ ಕೇಳುತ್ತೇನೆ ಎಲ್ಲರ ಮುಂದೆ ನನ್ನ ಗೌರವವನ್ನು ಹಾಳು ಮಾಡಬೇಡಿರಿ ಎಂದು ಬೋಧಕರಿಗೆ ಬೋಧಿಸುವಂತ ಬುದ್ಧಿಯುಳ್ಳ ವಿಶ್ವಾಸಿಗಳು ಸಭೆಯಲ್ಲಿ ಎದ್ದಿದ್ದಾರೆ. ಬೋಧಕರಿಗೆ ವಾಕ್ಯವನ್ನು ತೋರಿಸಿ ಮಾತನಾಡುವ ವಿಶ್ವಾಸಿಗಳಿಗೆ ಏನು ಹೇಳಬೇಕೋ ನೀನೇ ಯೋಚಿಸು.

ಪ್ರಿಯ ದೇವರ ಮಗುವೇ, ನೀನಾದರೋ ಅಂತಹ ವಿಶ್ವಾಸಿ ಆಗಬೇಡ ನೀನು ಬೋಧಕರ ಮಾತನ್ನು ಕೇಳುವಾಗ ಖಂಡಿತವಾಗಿ

ಆಶೀರ್ವದಿಸಲ್ಪಡುತ್ತೀಯ, ಯಾಕೆಂದರೆ ಯೇಸುಕ್ರಿಸ್ತನು ಮತ್ತು ಶಿಷ್ಯರು ಬಿಟ್ಟು ಹೋಗಿರುವ ಸೇವೆಯನ್ನೇ ನಿನ್ನ ಬೋಧಕರು ಮಾಡುತ್ತಿರುವುದು ಎಂದು ನೀನು ಅರ್ಥಮಾಡಿಕೊಳ್ಳಬೇಕು.

"ನಿನ್ನನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ. ನನ್ನನ್ನು ಸೇರಿಸಿಕೊಳ್ಳುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನೇ ಸೇರಿಸಿಕೊಳ್ಳುವವನಾಗಿದ್ದಾನೆ." (ಮತ್ತಾಯ 10:40) ನಿಮ್ಮ ಮಾತನ್ನು ಕೇಳುವವನು ನನ್ನ ಮಾತನ್ನು ಕೇಳುವವನನಾಗಿದ್ದಾನೆ; ನಿಮ್ಮನ್ನು ಅಲಕ್ಷ್ಯಮಾಡುವವನು ನನ್ನನ್ನು ಅಲಕ್ಷ್ಯ ಮಾಡುವವನಾಗಿದ್ದಾನೆ; ನನ್ನನ್ನು ಅಲಕ್ಷ್ಯ ಮಾಡುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನೇ ಅಲಕ್ಷ್ಯ ಮಾಡುವವನಾಗಿದ್ದಾನೆ"(ಲೂಕ 10:16) ಸೇವೆ ಮಾಡುತ್ತಿರುವ ಶಿಷ್ಯರಿಗೆ ಈ ಮಾತುಗಳನ್ನು ಸತ್ಯವೇದದಲ್ಲಿ ಹೇಳಲಾಗಿದೆ. ಅಂದರೆ ನಿಮ್ಮ ಬೋಧಕರು ಯೇಸುಕ್ರಿಸ್ತನು ಬಿಟ್ಟು ಹೋದ ಸೇವೆಯನ್ನು ಶಿಷ್ಯರು ಮಾಡಿ ಹೋದ ಸೇವೆಯನ್ನೇ ಮುಂದುವರಿಸಿಕೊಂಡು ಹೋಗುತ್ತಿರುವುದರಿಂದ ಅವರ ಮಾತನ್ನು ನೀನು ಕೇಳಲೇ ಬೇಕು. ಅವರ ಮಾತಿಗೆ ಕಡ್ಡಾಯವಾಗಿ ವಿಧೇಯವಾಗಲೇ ಬೇಕು. ಯಾಕೆಂದರೆ ಅವರ ಬಾಯನ್ನು ಉಪಯೋಗಿಸಿಕೊಂಡು ಕರ್ತನು ನಿನ್ನ ಬಳಿಯಲ್ಲಿ ಮಾತನಾಡುತ್ತಿರುತ್ತಾರೆ. ಅವರನ್ನು ನೋಡಬೇಡ ಅವರಲ್ಲಿ ಕಾರ್ಯನಡೆಸುತ್ತಿರುವ ಕ್ರಿಸ್ತನನ್ನು ಗಮನಿಸು. ಆಗ ದೇವರ ಮಾತನ್ನು ಕೇಳುವ ನಿನಗೆ ಮಾನ ಬರುವಂತೆ ಕರ್ತನು ಮಾಡುತ್ತಾನೆ. ಆಗ "ನಿನ್ನಂತ ವಿಶ್ವಾಸಿಯು ಯಾರು ಇಲ್ಲ". ಎಂದು ಸಭೆಯಲ್ಲಿ ಎಲ್ಲರೂ ನಿನ್ನನ್ನು ನೋಡಿ ಸಂತೋಷ ಪಡುತ್ತಾರೆ. ನಿನ್ನನ್ನು ನೋಡಿ ಸಭೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಕಲಿತುಕೊಳ್ಳುತ್ತಾರೆ.

ನೀನು ಯಾವ ಕಾರಣಕ್ಕೂ ಸೈತಾನನ ಮಾತಿಗೆ ಕಿವಿಗೊಟ್ಟು ಸ್ವಂತ ಇಷ್ಟದ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡು ಮುಂದೆ ಹೋಗಿ ನಿತ್ಯಜೀವವನ್ನು ನಷ್ಟ ಪಡಿಸಿಕೊಳ್ಳಬೇಡ. ದುಡುಕಿ ತೀರ್ಮಾನ ತೆಗೆದುಕೊಂಡು ನಿನಗಾಗಿ ಕೊಡಲ್ಪಟ್ಟಿರುವ ಸಭೆಯನ್ನು ಕಳೆದುಕೊಳ್ಳಬೇಡ. ಶಾಂತಿ ಗುಣದಿಂದ ಕರ್ತನು ಹೇಳುವ ಮಾತುಗಳನ್ನು ಅರ್ಥಮಾಡಿಕೊಂಡು ಆ ಮಾತಿಗೆ ಅಧೀನವಾಗಿ ನಿನ್ನ ಜೀವನಕ್ಕೆ ಆತನ ಮಾತನ್ನು ಅಳವಡಿಸಿಕೊಳ್ಳುವುದೇ ನಿನಗೆ ಎಷ್ಟೋ ಮೇಲು.

ನಿನಗೆ ಉಪದೇಶಿಸುವ ಬೋಧಕರು ನಿನಗೆ ಬಡವರಾಗಿ ಕಾಣಬಹುದು "ಬಡವರನ್ನು ಹಿಂಸಿಸುವವನು ಸೃಷ್ಟಿಕರ್ತನನ್ನು ಹೀನೈಸುವನು,"(ಜ್ಞಾನೋ 14:31) ನಿನ್ನನ್ನು ಕ್ರಿಸ್ತನ ಮಾರ್ಗದಲ್ಲಿ ನಡೆಸುವ ಬೋಧಕರು ಬಡವರು ಎಂದು ನೀನು ಅವರನ್ನು ಹೀನವಾಗಿ ಕಾಣುವುದಾದರೆ ಕರ್ತನು ನಿನ್ನನ್ನು

ಶಿಕ್ಷಿಸುತ್ತಾನೆ. ನೀನು ಮಾಡುತ್ತಿರುವ ಕೆಲಸವನ್ನು ತಿಳುವಳಿಕೆಯಿಂದ ನಡೆಸು; ಆಗ ಕರ್ತನ ಮಾತುಗಳನ್ನು ಅರ್ಥಮಾಡಿಕೊಂಡು ಬೋಧಕರಿಗೆ ಅಧೀನವಾಗಿ ಕರ್ತನ ಮಾರ್ಗದಲ್ಲಿ ನಡೆಯುವುದು ಮತ್ತು ಕರ್ತನನ್ನು ಘನಪಡಿಸುವ ಕೆಲಸ ಏನೆಂದು ನಿನಗೆ ಅರ್ಥವಾಗುತ್ತದೆ.

"ಚೆನ್ನಾಗಿ ಅಧಿಕಾರ ನಡೆಸುವ ಸಭೆಯ ಹಿರಿಯರನ್ನು, ಅವರೊಳಗೆ ವಿಶೇಷವಾಗಿ ಪ್ರಸಂಗದಲ್ಲಿಯೂ ಉಪದೇಶದಲ್ಲಿಯೂ ಕಷ್ಟಪಡುವವರನ್ನು ಇಮ್ಮಡಿಯಾದ ಮಾನಕ್ಕೆ ಯೋಗ್ಯರೆಂದು ಎಣಿಸಬೇಕು." (1ತಿಮೊ 5:17) ಈ ವಾಕ್ಯದಿಂದ ನೀನು ನಿನ್ನ ಬೋಧಕರನ್ನು ಎಷ್ಟು ಗೌರವಿಸಬೇಕೆಂದು ತಿಳಿದುಕೋ. "ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ತಂದಯು ಅವನಿಗೆ ಬಹುಮಾನ ಮಾಡುವನು" (ಯೋಹಾನ 12:26) ಎಂದು ನಮ್ಮ ಪ್ರಿಯ ಕರ್ತನಾದ ಯೇಸುಕ್ರಿಸ್ತನು ಹೇಳಿದ್ದಾರೆ. ಹಾಗಾದರೆ ತಂದೆಯಿಂದ ಗೌರವವನ್ನು ಹೊಂದಿಕೊಳ್ಳಲು ಯೋಗ್ಯರಾಗಿ ನಿಂತಿರುವವರನ್ನು ನೀನು ಎಷ್ಟು ಗೌರವಿಸಬೇಕು ಎಂದು ಅರ್ಥಮಾಡಿಕೊಳ್ಳಲು ಪ್ರಯಾಸಪಡು.

ಪ್ರಿಯ ದೇವರ ಮಗುವೇ, ನಿನ್ನನ್ನು ನೀನು ಕ್ರಮಪಡಿಸಿಕೊಳ್ಳಲು ಎಷ್ಟೇ ಶ್ರಮಪಟ್ಟರೂ, ನಾನೇ ಬೈಬಲ್ ಓದಿಕೊಳ್ಳುತ್ತೇನೆ, ಪ್ರಾರ್ಥಿಸಿಕೊಳ್ಳುತ್ತೇನೆ, ನನಗೆ ಸಭೆ ಬೇಡ ಯಾರೂ ಬೇಡ, ನನ್ನ ಮೇಲೆ ಯಾರು ಅಧಿಕಾರ ನಡೆಸುವುದು ಬೇಡವೇ–ಬೇಡ, ಎಂದು ನಿನ್ನಷ್ಟಕ್ಕೆ ನೀನೇ ತೀರ್ಮಾನಿಸಿಕೊಂಡು, ನಿನಗೆ ನೀನೇ ಬೋಧಿಸಿಕೊಂಡು ನಿನ್ನ ಆತ್ಮವನ್ನು ಅನೇಕ ಆತ್ಮೀಕ ಕಟ್ಟುಪಾಡಿನಲ್ಲಿಟ್ಟುಕೊಂಡು ಭದ್ರಪಡಿಸಿಕೊಳ್ಳುವೆನು ಎಂದು ಮುಂದರಿದರೆ, ನಿನ್ನ ಈ ರೀತಿಯ ಪ್ರಯತ್ನಗಳಿಂದ ನಿನ್ನ ಆತ್ಮೀಕ ಜೀವನದಲ್ಲಿ ಪೂರ್ಣವಾದ ಜಯವನ್ನು ಕಾಣಲಾರೆ; ಮತ್ತು ಆತನು ನಿನಗಾಗಿ ಇಟ್ಟಿರುವ ನಿತ್ಯರಾಜ್ಯಕ್ಕೆ ನೀನು ಸೇರಲಾರೆ. ಖಂಡಿತವಾಗಿ ನಿತ್ಯರಾಜ್ಯವನ್ನು ಕಳೆದುಕೊಳ್ಳುತ್ತೀಯಾ. ಯಾಕೆಂದರೆ "ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ" (ಇಬ್ರಿಯರಿಗೆ 10:25) ಎಂದು ಪೌಲನು ಹೇಳುತ್ತಿದ್ದಾನೆ. ಆದುದರಿಂದ ನಿನ್ನನ್ನು ಕರ್ತನಿಗೂ ಆತನ ಕೃಪಾ ವಾಕ್ಯಕ್ಕೂ ಒಪ್ಪಿಸಿಕೊಡು. ನಿನ್ನ ಅಮೂಲ್ಯವಾದ ಜೀವನವನ್ನು ಕರ್ತನ ಆಶ್ರಯಕ್ಕೆ ಅಧೀನಪಡಿಸು. ದೇವರ ವಾಕ್ಯವನ್ನು ಅಸಡ್ಡೆ ಮಾಡುವ ಅಧಿಕಾರ ನಿನಗೆ ಕೊಡಲ್ಪಟ್ಟಿಲ್ಲ.

ದೈವೀಕ ಸ್ವಭಾವದಿಂದ ಕೂಡಿ ಬಾಳುವುದೇ ಕರ್ತನನ್ನು ಘನಪಡಿಸುವ ಜೀವನವಾಗಿದೆ. ನಿನಗಾಗಿ ಕೊಟ್ಟಿರುವ ಸಭೆಯನ್ನು ಪ್ರೀತಿ ಮಾಡು, ನಿನ್ನನ್ನು

ಒಳ್ಳೇ ಮಾರ್ಗದಲ್ಲಿ ನಡೆಸುವ ನಿನ್ನ ಬೋಧಕರನ್ನು ಗೌರವಿಸು. ನಿನ್ನ ಎಲ್ಲಾ ನಡವಳಿಕೆಯಲ್ಲಿ ಕರ್ತನ ಚಿತ್ತಕ್ಕೆ ಒಪ್ಪಿಸಿಕೊಟ್ಟು ಕ್ರಿಸ್ತನ ಮಾರ್ಗದಲ್ಲಿ ನಡೆ. ಆ ರೀತಿಯಲ್ಲಿ ನೀನು ನಡೆಯುವಾಗ ನಿನ್ನ ಮಾರ್ಗವನ್ನು ಕರ್ತನು ಸರಾಗ ಮಾಡುವನು, ನೀನು ಆಯ್ಕೆ ಮಾಡಿಕೊಂಡು ಹೋಗುವ ಮಾರ್ಗಕ್ಕಿಂತ ಕರ್ತನ ಮಾರ್ಗಗಳು ಉತ್ತಮವಾಗಿದೆ ಎಂದು ಅರ್ಥಮಾಡಿಕೋ.

ನೀನು ಕರ್ತನಿಗೆ ವಿರುದ್ಧವಾಗಿ ನಡೆದು, ತಪ್ಪು ಮಾಡಿದಾಗ ನಿನ್ನ ಬೋಧಕರಿಂದ ಎಚ್ಚರಿಕೆಯ ಮಾತುಗಳನ್ನು ನಿನಗೆ ಕರ್ತನು ತಿಳಿಸುತ್ತಾನೆ, ಅದಕ್ಕಾಗಿ ನಿನ್ನ ತಪ್ಪು ಯಾವುದೆಂದು ತಿಳಿದುಕೊಂಡು ಅದನ್ನು ಬಿಟ್ಟು ಬಿಡಲು ಪ್ರಯತ್ನ ಮಾಡು. ಬೋಧಕರದೇ ತಪ್ಪು ಎಂದು ನೀನು ತಿಳಿಯುವುದಾದರೆ ಯಾವುದೇ ಕಾರಣಕ್ಕೂ ನಿನ್ನ ತಪ್ಪು ಯಾವುದು ಎಂದು ನೀನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಕರ್ತನ ಮಾತುಗಳನ್ನು ನೀನು ಅನುಸರಿಸಿ ನಡೆಯುವಾಗ ಈ ಲೋಕದಲ್ಲಿ 'ನಿನ್ನ ಹಾಗೆ ಯಾರೂ ಇರುವುದಿಲ್ಲ;' ಎಲ್ಲರು ನಿನ್ನನ್ನು ನೋಡಿ ಕಲಿಯುತ್ತಾರೆ, ನಿನ್ನಿಂದ ಕರ್ತನ ಮಹಿಮೆಯನ್ನು ಹೆಚ್ಚಿಸಬಹುದು. ನಿನ್ನ ಹೆಸರನ್ನು ಕರ್ತನು ಪ್ರಖ್ಯಾತಿಗೆ ತರುವನು. ಒಳ್ಳೇಯ ಕಾರ್ಯಗಳಿಗೆ ಮನಸ್ಸು ಕೊಡು. ಒಳ್ಳೆ ವಿಶ್ವಾಸಿಯಾಗಿ ನೀನು ಜೀವಿಸಲೇ ಬೇಕು. ಆಗಲೇ ಕರ್ತನು ನಿನ್ನ ಸಂಗಡವಿದ್ದು ನಿನಗೆ ಪ್ರತಿಯೊಂದು ಹಂತದಲ್ಲಿಯೂ ಜಯವನ್ನು ಕೊಡುತ್ತಾನೆ.

# 6. ಐಕ್ಯತೆಯಿಂದಿರು

**ತಂದೆಯೊಟ್ಟಿಗೆ ಐಕ್ಯತೆ:**

"ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ನಿನ್ನನ್ನು ಆರಿಸಿಕೊಂಡನು." (ಎಫೆಸ 1:4)

ನಮ್ಮ ತಂದೆಯು ನಿನ್ನ ಸಕಲ ದೋಷಗಳನ್ನು ಕ್ಷಮಿಸಲು ಯಾವಾಗಲೂ ಸಿದ್ಧವಾಗಿದ್ದಾನೆ ಆದುದರಿಂದಲೇ ಆತನ ಒಬ್ಬನೇ ಮಗನನ್ನು ನಿನಗಾಗಿ ಬಲಿಯಾಗಿ ಸಮರ್ಪಿಸಿ ನಿನ್ನನ್ನು ತನ್ನ ಮಗುವಾಗಿ ಅಂಗೀಕರಿಸಿಕೊಂಡಿದ್ದಾರೆ. "ಮಗನನ್ನೇ ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೇ ಇರುವನೇ" (ರೋಮಾ 8:33) ನಿನಗೆ ಎಷ್ಟೋ ಒಳ್ಳೆಯವುಗಳನ್ನೆಲ್ಲಾ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಕೊಡಲು ಮನಸ್ಸುಳ್ಳ ನಮ್ಮ 'ತಂದೆ ದೇವರನ್ನು' ನೋಡಿ ಒಮ್ಮೆ ಮೊಣಕಾಲೂರಿ ಹೇಳುತ್ತೀಯಾ 'ತಂದೆಯೇ ನಿನ್ನ ಹಾಗೆ ಯಾರೂ ಇಲ್ಲ' ಎಂದು.

ಅದಕ್ಕಾಗಿ ಕರ್ತನು ಹೇಳುತ್ತಾನೆ–ಲೋಕವನ್ನಾಗಲಿ, ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಿಬೇಡಿರಿ, ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ ಬದುಕು ಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ, ಲೋಕವೂ ಅದರ ಆಶೆಯೂ ಗತಿಸಿಹೋಗುತ್ತದೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು (1ಯೊಹಾ 2:15–17) ಹಾಗಾದರೆ ನಿನಗೆ ಯಾರ ಮೇಲೆ ಪ್ರೀತಿ ಇದೆ. ಈ ಲೋಕದ ಮೇಲೆಯೋ? ತಂದೆಯ ಮೇಲೆಯೋ? ನೀನೇ ಆಲೋಚಿಸು! ತಂದೆಯನ್ನು ಪ್ರೀತಿಮಾಡುವುದಾದರೆ ನಿನಗೆ ತಂದೆಯೊಟ್ಟಿಗೆ ಐಕ್ಯತೆ ಇರುತ್ತದೆ. ಲೋಕವನ್ನು ಪ್ರೀತಿಸುವುದಾದರೆ ನಿನಗೆ ಲೋಕದೊಟ್ಟಿಗೆ ಐಕ್ಯತೆ ಇರುತ್ತದೆ. ಇಂದು ನಿನ್ನ ಐಕ್ಯತೆ ಯಾವುದರ ಮೇಲೆ ಹೋಗುತ್ತಿದೆ?

ಪ್ರಿಯ ದೇವರ ಮಗುವೇ ತಂದೆಯೊಟ್ಟಿಗೆ ನಿನ್ನ ಐಕ್ಯತೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಬೆಳೆಸಿಕೊಳ್ಳಲು ಪ್ರಾರ್ಥನೆಯಲ್ಲಿ ಪ್ರಯಾಸ ಪಡು. ಯಾಕೆಂದರೆ ನಮ್ಮ ತಂದೆಯ ಹಾಗೆ ಯಾರೂ ಇಲ್ಲವೇ ಇಲ್ಲ. ಆತನಿಗೆ ನಿನ್ನ ಮೇಲೆ ಎಷ್ಟೋ ಪ್ರೀತಿಯಿದೆ. ಅದಕ್ಕೋಸ್ಕರವೇ ಅಲ್ಲವೇ ತನ್ನ ಒಬ್ಬನೇ ಮಗನನ್ನು ನಿನಗಾಗಿ ಬಲಿಕೊಟ್ಟನು.

**ಯೇಸುಕ್ರಿಸ್ತನೊಟ್ಟಿಗೆ ಐಕ್ಯತೆ:**

"ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ, ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ. (ಎಫೆ 4:3)

ಅಂದು ಯೋನಾತಾನನ ಪ್ರಾಣವು ದಾವೀದನ ಪ್ರಾಣದೊಡನೆ ಒಂದಾಯಿತು. ಅವನು ಇವನನ್ನು ತನ್ನ ಪ್ರಾಣದಂತೆಯೇ ಪ್ರೀತಿಸತೊಡಗಿದನು, ಆದುದರಿಂದ ಯೋನಾತಾನನು ತನ್ನ ತಂದೆಯಾದ ಸೌಲನು ದಾವೀದನನ್ನು ಕೊಲೆಮಾಡುತ್ತಾನೆಂದು ತಿಳಿದು ದಾವೀದನನ್ನು ತನ್ನ ತಂದೆಯಿಂದ ತಪ್ಪಿಸಿದನು.

ಒಂದು ಸ್ನೇಹಿತನಿಗೋಸ್ಕರ ಯೋನಾತಾನನು ಪ್ರಯಾಸಪಟ್ಟು ಪ್ರಾಣವನ್ನು ಉಳಿಸಿದನು. ಇಂದು ನೀನು ನಿನ್ನ ಜೊತೆ ವಿಶ್ವಾಸಿಯನ್ನು ಸಹಿಸಿಕೊಂಡು ಪ್ರೀತಿಮಾಡಲು ಕಲಿತುಕೋ. ಮತ್ತು ಪವಿತ್ರಾತ್ಮನೊಟ್ಟಿಗೆ ಐಕ್ಯತೆಯನ್ನು ಕಾಪಾಡಿಕೊಳ್ಳುವುದಕ್ಕೆ ಪ್ರಯಾಸಪಡು. ನಿನ್ನ ಐಕ್ಯತೆಯು ತಂದೆಯೊಟ್ಟಿಗೂ ಆತನ ಮಗನಾದ ಯೇಸುಕ್ರಿಸ್ತನೊಟ್ಟಿಗೂ ಮತ್ತು ಪರಿಶುದ್ಧಾತ್ಮನೊಟ್ಟಿಗೂ ಇರಬೇಕಾಗಿದೆ. ನಮ್ಮ ಕರ್ತನ ಬಳಿ ಪಕ್ಷಪಾತವಿಲ್ಲ. ಆತನನ್ನು ಪ್ರೀತಿಸುವ ಪ್ರತಿಯೊಬ್ಬರೊಟ್ಟಿಗೂ ಆತನು ಐಕ್ಯವಾಗಿರಬೇಕೆಂದು ಇಷ್ಟಪಡುತ್ತಿದ್ದಾನೆ.

ಪ್ರತಿಯೊಬ್ಬರೂ ಸಾಧ್ಯವಾದಷ್ಟು ತಮ್ಮ ಐಕ್ಯತೆಯನ್ನು ತನ್ನ ಕುಟುಂಬದವರೊಟ್ಟಿಗೂ ಸ್ನೇಹಿತರೊಟ್ಟಿಗೂ ಹಣ ಸಂಪಾದನೆ ಮಾಡುವವರೊಟ್ಟಿಗೂ ಇಟ್ಟುಕೊಂಡಿರುತ್ತಾರೆ. ಇದು ತಪ್ಪಲ್ಲ ಆದರೆ ಮುಖ್ಯವಾಗಿ ನಮ್ಮ ತ್ರೈಐಕ್ಯ ದೇವರೊಟ್ಟಿಗೆ ಐಕ್ಯತೆಯನ್ನು ಕಳೆದುಕೊಂಡು ಜೀವಿಸುತ್ತಿದ್ದಾರೆ. ಇದು ಬಹಳ ತಪ್ಪು.

"ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ." (ಯೋಹಾನ 15:13) ಆಂಗ್ಲ ಭಾಷೆಯಲ್ಲಿ ಒಂದು ಗಾದೆ ಮಾತಿದೆ. 'ನಾನು ಯಾರೆಂದು ನಿನಗೆ ತಿಳಿಯಬೇಕಾದರೆ ನನ್ನ ಸ್ನೇಹಿತನನ್ನು ನೋಡು' ಎಂದು. ಪ್ರಿಯ ದೇವರ ಮಗುವೇ ನಿನ್ನ ನಿಜವಾದ ಸ್ನೇಹಿತ ಯೇಸುಕ್ರಿಸ್ತನೇ ಆಗಿರಲಿ. ಆಗ ನೀನು ಯಾರೆಂದು ಈ ಪ್ರಪಂಚಕ್ಕೆ ತುಂಬಾ ಚೆನ್ನಾಗಿ ಅರ್ಥವಾಗುತ್ತದೆ. ಯೇಸುಕ್ರಿಸ್ತನು ನಿನ್ನನ್ನು ತನ್ನ ಸ್ನೇಹಿತರೆಂದು ಕರೆಯುತ್ತಿದ್ದಾನೆ.

ಕರ್ತನು ಅನುಗ್ರಹಿಸುವ ಒಳ್ಳೆಯವುಗಳೆಲ್ಲವೂ ಆತನ ಮಕ್ಕಳಾಗಿ ಮತ್ತೆ ಹುಟ್ಟಿದ ಅನುಭವವುಳ್ಳವರಿಗೆ ಅಂದರೆ ರಕ್ಷಣೆ ಹೊಂದಿದವರಿಗೆ ಸೀಮಿತವಾಗಿದೆ. ನೀವು ಎಡೆಬಿಡದೆ ಕರ್ತನ ಐಕ್ಯತೆಯಲ್ಲಿ ಜೀವಿಸಿ ಆನಂದಿಸುವುದನ್ನೇ ಲಕ್ಷ್ಯವನ್ನಾಗಿಟ್ಟುಕೊಂಡಿರುವಿರಾದರೆ ನಿಮ್ಮ ಪರಿಸ್ಥಿತಿ ಶೀಘ್ರವಾಗಿ ಬದಲಾಗುವದು, ನಿನ್ನ ಕಟ್ಟುಗಳು ಬಿಚ್ಚಲ್ಪಡುವವು, ವ್ಯಥೆಗಳು ದೂರವಾಗುವವು. ಮತ್ತು ನಿನ್ನ ಕಾರ್ಯಗಳೆಲ್ಲವು ಸಫಲವಾಗುವುದು,

ಪ್ರಿಯ ದೇವರ ಮಗುವೇ, ನಾವೆಲ್ಲರೂ ನಂಬಿಕೆಯಿಂದಲೂ ದೇವ ಕುಮಾರನ ವಿಷಯವಾದ ಜ್ಞಾನದಿಂದ ಉಂಟಾಗುವ ಐಕ್ಯತೆಯನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನಲ್ಲಿ ನೆಲೆಗೊಳ್ಳಬೇಕು. ನೀನು ಕ್ರಿಸ್ತನಲ್ಲಿ ನೆಲೆಗೊಳ್ಳುವಾಗ, ನಿನ್ನೊಳಗೆ ಕ್ರಿಸ್ತನೂ ನಿನ್ನ ಪ್ರಾಣವಾಗಿ ನೆಲೆಗೊಳ್ಳುವನು, ನಿನ್ನನ್ನು ಅಂಗೈಯಲ್ಲಿ ಭದ್ರವಾಗಿ ಇಟ್ಟುಕೊಂಡು ನಿನ್ನ ಜೊತೆಯಲ್ಲಿ ಸದಾ ಇದ್ದು ಸಮಾಧಾನವನ್ನು ಅನುಗ್ರಹಿಸುವನು, ಕ್ರಿಸ್ತನಿಂದ ಉಪಕಾರವನ್ನು ಹೊಂದುತ್ತಿರುವ ನಿನ್ನನ್ನು ನೋಡಿ ಜನರು ಹೇಳುತ್ತಾರೆ 'ನಿನ್ನ ಹಾಗೆ ಯಾಗೂ ಇಲ್ಲ' ಎಂದು, ಆಗ ನೀನು ಹೇಳಬಹುದು ಕ್ರಿಸ್ತನ ಹಾಗೆ ನನ್ನನ್ನು ಪ್ರೀತಿಸುವವರು ಒಬ್ಬರಿಲ್ಲ ಎಂದು.

ನೀನು ಕ್ರಿಸ್ತನಲ್ಲಿ ಐಕ್ಯತೆಯಾಗಿ ಇರಬೇಕು ಆಗ ನಿನ್ನ ಸುತ್ತಮುತ್ತಲು ಇರುವ ಜನರ ಬಗ್ಗೆ ಚಿಂತಿಸಲು ಸಾಧ್ಯವಾಗುತ್ತದೆ. ನಿನಗೋಸ್ಕರ ಯೇಸುಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣಕೊಟ್ಟನು, 3ನೇ ದಿನದಲ್ಲಿ ಸಾವನ್ನು ಗೆದ್ದು ಪುನರುತ್ಥಾನವಾಗಿ ಎದ್ದರು. ಮತ್ತೇ ನಿನಗೋಸ್ಕರ ಬಿಡಾರಗಳನ್ನು ಹಾಕಿ ತಿರುಗಿ ಬರುತ್ತೇನೆ ಎಂದು ಹೇಳಿ ಪರಲೋಕಕ್ಕೆ ಏರಿಹೋದನು, ನಿನ್ನ ಸಹಾಯಕ್ಕಾಗಿ ಪವಿತ್ರಾತ್ಮನನ್ನು ಕಳುಹಿಸಿದನು, ನಿನ್ನ ಕೆಲಸಗಳನ್ನು ಮಾಡುವುದಕ್ಕೆ ನಿನ್ನನ್ನು ಯಾವಾಗಲೂ ಕಾಯುವುದಕ್ಕೆ ದೇವದೂತರನ್ನು ಕಳುಹಿಸಿದನು. ಯೇಸುವಿನ ನಾಮದಲ್ಲಿ ನೀನು ಏನೇ ಕೇಳುವುದಾದರೂ ಅದನ್ನು ಕೊಟ್ಟು ನಿನ್ನನ್ನು ನಡೆಸುವ ಯೇಸುವನ್ನು ನೀನು ತಿಳಿದುಕೊಂಡ ಹಾಗೆ ನಿನ್ನ ಜೊತೆಯಲ್ಲಿರುವ ವ್ಯಕ್ತಿಗಳು ತಿಳಿದುಕೊಳ್ಳಬೇಕು ಎನ್ನುವ ಆಸೆ ನಿನ್ನೊಳಗೆ ಬರುವುದಾದರೆ ನೀನು ಅನೇಕರೊಟ್ಟಿಗೆ ಕ್ರಿಸ್ತನ ಐಕ್ಯತೆಯನ್ನು ಬೆಳೆಸಿಕೊಳ್ಳಲು ಮುಂದಾಗುತ್ತೀಯಾ.

"ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ ಆಮೆನ್" (ಎಫೆಸ 3:20,21)

ನಮ್ಮ ಕರ್ತನು ತನ್ನ ಪ್ರತಿಯೊಂದು ಮಕ್ಕಳಿಗೆ ಅನೇಕ ಅದ್ಭುತಗಳನ್ನು ಮಾಡಲು ಸಿದ್ಧನಾಗಿದ್ದಾನೆ. ಮನುಷ್ಯನು ಸ್ವಲ್ಪ ಯೋಚಿಸುವುದಾದರೆ ಕರ್ತನು ಬೆಟ್ಟದಷ್ಟು ಕಾರ್ಯಗಳನ್ನು ಮಾಡಲು ಸಿದ್ಧವಾಗಿದ್ದಾನೆ. ಈಗಾಗಲೇ ನಿನ್ನ ಜೀವನದಲ್ಲಿ ಅನೇಕ ಅತಿಶಯವಾದ ಕಾರ್ಯಗಳನ್ನು ಮಾಡಿದ್ದಾನೆ. ನೀನು ಇಲ್ಲ, ಕರ್ತನು ನನಗೆ ಏನು ಮಾಡಲಿಲ್ಲ, ಎಂದು ಹೇಳಲು ಸಾಧ್ಯವೇ ಇಲ್ಲ. ನೀನು ಕ್ರಿಸ್ತನಲ್ಲಿ ಐಕ್ಯತೆಯನ್ನು ಬೆಳೆಸಿಕೊಂಡಿದ್ದಕ್ಕಾಗಿಯೇ ನೀನು ಅನೇಕ ಆಶೀರ್ವಾದಗಳನ್ನು ಆತನಿಂದ ಹೊಂದುಕೊಂಡಿರುತ್ತೀಯಾ. ಆದುದರಿಂದ ನೀನು ನಿನ್ನ ಜೊತೆಯಲ್ಲಿ ಇರುವ ಬಂಧುಗಳಿಗೆ, ಸ್ನೇಹಿತರಿಗೆ ಈ ಮಾತಿನ ಸತ್ಯವನ್ನು ತಿಳಿಸುವಾಗ ದೇವರ ಐಕ್ಯತೆ ನಿನ್ನಲ್ಲಿ ಬೆಳೆದ ಹಾಗೆ ಅವರಲ್ಲಿಯೂ ಬೆಳೆಯಲು ಸಾಧ್ಯವಾಗುತ್ತದೆ. ಕ್ರಿಸನ ಮಾತಿನ ರಹಸ್ಯವನ್ನು ಈ ಪ್ರಪಂಚಕ್ಕೆ ತಿಳಿಸಲು ನೀನು ಕ್ರಿಸ್ತನಿಂದ ಆಯ್ಕೆಯಾದ ಸಾಧನವಾಗಿದ್ದೀಯಾ.

ಕ್ರಿಸ್ತನು ನಿನ್ನ ನಂಬಿಕೆಯ ಮೂಲಕ ನಿನ್ನ ಹೃದಯದಲ್ಲಿ ವಾಸಮಾಡುವ ಹಾಗೆ ಅನೇಕರ ಹೃದಯದಲ್ಲಿಯೂ ಕರ್ತನು ತನ್ನ ಮಹಿಮಾತಿಶಯದ ಪ್ರಕಾರ ವಾಸಮಾಡುಲು ಇಚ್ಚಿಸುತ್ತಾನೆ. ಅದಕ್ಕೋಸ್ಕರವಾಗಿಯೇ ನಿನ್ನ ಜನರ ಮಧ್ಯದಲ್ಲಿ ನಿನ್ನನ್ನು ಆಶೀರ್ವದಿಸಿ ನಡೆಸುತ್ತಿರುವುದು. ದೂರವಾಗಿದ್ದ ನಿನ್ನನ್ನು ಕ್ರಿಸ್ತನು ತನ್ನ ರಕ್ತದಿಂದ ಆತನ ಸಮೀಪಕ್ಕೆ ಕರೆದುಕೊಂಡಿದ್ದಾನೆ. ಅದೇ ರೀತಿ ನಿನ್ನ ಕುಟುಂಬದ ಸದಸ್ಯರು, ನಿನ್ನ ಸ್ನೇಹಿತರು ಕ್ರಿಸ್ತನ ರಕ್ತಕ್ಕೆ ಸಮೀಪವಾಗಲು ನೀನೇ ಪ್ರಯಾಸಪಡಬೇಕು. ನಿನ್ನ ಕಣ್ಣಿಗೆ ಕಾಣುವ ಮನುಷ್ಯರಿಗೆ ನೀನೇ ಜವಾಬ್ದಾರಿ ತೆಗೆದುಕೊಳ್ಳಬೇಕು. ಅವರೆಲ್ಲರೂ ಯೇಸುಕ್ರಿಸ್ತನನ್ನು ಅರಿಯಲು ನಿನಗೆ ತಿಳಿದಿರುವ ಮಾತನ್ನೆಲ್ಲಾ ನೀನೇ ತಿಳಿಸಬೇಕು.

ನಿನಗೆ ಕರ್ತನ ಸ್ನೇಹ ಸಿಕ್ಕಿರುವುದರಿಂದ ನಿನ್ನ ಮನೋಭಾವ, ಚಿಂತನೆ, ನಡತೆ, ಉದ್ದೇಶ, ಆಶೆ ಕೃತ್ಯಗಳೆಲ್ಲವೂ ಕರ್ತನ ದೃಷ್ಟಿಯಲ್ಲಿ ಯೋಗ್ಯವುಳ್ಳದ್ದಾಗಿರಬೇಕು. ಆಗಲೇ ನೀನು ಕ್ರಿಸ್ತನಲ್ಲಿ ಐಕ್ಯತೆಯಾಗಿ ಬೆಳೆಯುವುದಕ್ಕೆ ಸಾಧ್ಯ. ನೀನು ನೆನಸಿದ್ದು ನೆರವೇರಲಿಲ್ಲವೆಂದು ಗುಣಗುಟ್ಟಬೇಡ, ನಿನ್ನ ಮನಸ್ಸು ಕರ್ತನಲ್ಲಿ ಐಕ್ಯತೆಯಾಗಿ ಇರುವಾಗ ಕರ್ತನು ನೆನಸಿದ್ದು ನಿಶ್ಚಯವಾಗಿ ನಿನ್ನ ಜೀವನದಲ್ಲಿ ನೆರವೇರುವದು. ಕರ್ತನ ಕಾರ್ಯವನ್ನು ಅರ್ಥಮಾಡಿಕೊಂಡು ಅದನ್ನು ನೆನಸಿ ಸಂತೋಷಪಡು. 'ಕ್ರಿಸ್ತನ ಹಾಗೆ ಯಾರು ಇಲ್ಲ' ಎಂದು ತಿಳುದುಕೋ.

ನಿನ್ನವರೆಲ್ಲ ನಿನ್ನನ್ನು ನೋಡಿ ಹೇಳಲೇ ಬೇಕು 'ನಿನ್ನ ಹಾಗೆ ಯಾರು ಇಲ್ಲ' ಎಂದು. ಯಾಕೆಂದರೆ ಅವರು ನಿನ್ನ ಹಾಗೆ ಕ್ರಿಸ್ತನಲ್ಲಿ ಐಕ್ಯವಾಗಿ

ನಡೆಯುವುದಿಲ್ಲ. ಮಾಡಿದ ಪಾಪವನ್ನು ಮತ್ತೆ-ಮತ್ತೆ ಮಾಡುತ್ತಲೇ ಇರುತ್ತಾರೆ. ಪಾಪದೊಟ್ಟಿಗೆ ಐಕ್ಯವಾಗಿಯೇ ಇರುತ್ತಾರೆ. ಆಗ ನಿನ್ನ ನಡವಳಿಕೆಯನ್ನು ಗಮನಿಸುವ ಅವರಿಗೆ ಯಾವಾಗಲೂ ಆಶ್ಚರ್ಯವಾಗುತ್ತಲೇ ಇರುತ್ತದೆ. ಆಗ ನಿನ್ನ ಮುಖಾಂತರ ಕರ್ತನ ನಾಮ ಮಹಿಮೆಗೊಳ್ಳುತ್ತದೆ. ನೀನು ಇನ್ನೂ ಹೆಚ್ಚು ಪರಿಶುದ್ಧವಾಗಿ ಕಾಣಿಸಲ್ಪಡಲು ಹೆಚ್ಚಾಗಿ ವಾಕ್ಯಗಳನ್ನು ಧ್ಯಾನಿಸು,

ನಿನಗೆ ಶೋಧನೆಗಳು ಬಂದರೆ ಜಯಿಸಲು ಕರ್ತನು ಬಲಕೊಡುತ್ತಾನೆ. ಕಾರಣ ಕ್ರಿಸ್ತನು ಸಹ ನಿನಗೋಸ್ಕರ ಭಾದೆಯನ್ನನ್ನುಭವಿಸಿ, ನೀನು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು. ಅದಕ್ಕಾಗಿ ಎಡೆಬಿಡದೆ ಪ್ರಾರ್ಥಿಸು, ದಾವೀದನ ಹಾಗೆ ಕೀರ್ತನೆಗಳನ್ನೂ, ಸಂಗೀತಗಳನ್ನೂ ಸ್ತುತಿಸು ಆಗ ಕರ್ತನು ನಿನ್ನ ಜೊತೆಯಲ್ಲಿ ಇರುತ್ತಾನೆ. ನೀನು ಕರ್ತನಲ್ಲಿ ಹೆಚ್ಚು ಐಕ್ಯತೆಯಿಂದ ಇರಬೇಕು ಎಂದು ಬಯಸುವುದಾದರೆ ನಿನ್ನ ಪಾಪಗಳನ್ನು ಕರ್ತನ ಮುಂದೆ ಸಂಪೂರ್ಣವಾಗಿ ಒಪ್ಪಿಕೊಂಡು ಅರಿಕೆ ಮಾಡಬೇಕು. ಮತ್ತೇ ಯಾವ ತಪ್ಪನ್ನೂ ಮಾಡಬಾರದು. ಆಗ ನೀನು ದಿನೇ-ದಿನೇ ಕರ್ತನಿಗೆ ಹತ್ತಿರವಾಗುತ್ತೀಯಾ ಮತ್ತು ನಿನ್ನಲ್ಲಿ ಶುದ್ಧಮನಸ್ಸು ಬೆಳೆದು ಬರುತ್ತದೆ.

ಪ್ರೀಯ ದೇವರ ಮಗುವೇ, ಪ್ರಪಂಚವು ಅನೇಕ ವಿಧಗಳಲ್ಲಿ ನಿನ್ನನ್ನು ಸೋಲುವಂತೆ ಮಾಡಲು ಯತ್ನಿಸುವದು, ಸೈತಾನನು ಸೋಲಿನ ಚಿಂತೆಯನ್ನು ತರುವನು, ಕೆಟ್ಟ ಜನರು ಕಠಿಣವಾದ ಮಾತುಗಳಿಂದ ಮನಸ್ಸನ್ನು ನೋಯಿಸುವರು. ಆದರೆ ನಿನ್ನ ಐಕ್ಯತೆ ನನ್ನ ಪ್ರಿಯ ರಕ್ಷಕನಾದ ಯೇಸು ಕ್ರಿಸ್ತನೊಟ್ಟಿಗೆ ಇರುವುದಾದರೆ ಆತನು ನಿನ್ನನ್ನು ಧೈರ್ಯಗೊಳಿಸಿ, ಸಂತೈಸುವಾತನಾಗಿದ್ದಾನೆ. ನೀನು ರೋಗದಲ್ಲಿ ಇರುವಾಗ ವೈದ್ಯರು ನಿನ್ನನ್ನು ಕೈಬಿಡುತ್ತಾರೆ, ಒಂದು ವೇಳೆ ಇನ್ನು ನೀನು ಬದುಕಲು ಸಾಧ್ಯವೇ ಇಲ್ಲ ಎಂದು ಹೇಳಿ ದೂರವಾಗುತ್ತಾರೆ, ಆದರೆ ನೀನು ಪ್ರೀತಿಸುವ ನಮ್ಮ ರಕ್ಷಕನು ಎಂದೆಂದೂ ನಿನ್ನ ಕೈಹಿಡಿದು 'ಧೈರ್ಯವಾಗಿರು ನಾನೇ ನಿನಗೆ ಆರೋಗ್ಯದಾಯಕನಾಗಿದ್ದೇನೆ. ನನ್ನ ಬಾಸುಂಡೆಗಳಿಂದ ನಿನಗೆ ಗುಣವಾಗುವುದು ಎಂದು ಹೇಳಿ ನಿನ್ನನ್ನು ಬಲಪಡಿಸಿ ಸಂತೈಸುತ್ತಾನೆ. ನಿನ್ನಲ್ಲಿ ಆತನು ಐಕ್ಯತೆಯನ್ನು ಬೆಳೆಸಲು ಯಾವಾಗಲೂ ಇಷ್ಟಪಡುತ್ತಾನೆ. ನೀನು ಕ್ರಿಸ್ತನ ಹೃದಯವನ್ನು ಅರ್ಥ ಮಾಡಿಕೊಂಡು ನೀನು ಸಹ ಕರ್ತನಲ್ಲಿ ದೃಢವಾಗಿ ನಿಲ್ಲುವಾಗ ಕರ್ತನ ದೈವಿಕ ಬಲ ನಿನ್ನಲ್ಲಿ ಬರುವುದು ನಿಶ್ಚಯ.

## ಪರಿಶುದ್ಧಾತ್ಮನೊಟ್ಟಿಗೆ ಐಕ್ಯತೆ:

ಪರಿಶುದ್ಧಾತ್ಮನನ್ನು ಹೊಂದಿಕೊಳ್ಳುವುದಾದರೆ ತಂದೆಯ ಬಳಿಯಲ್ಲಿ ಪ್ರವೇಶಿಲು ಸಾಧ್ಯವಾಗುತ್ತದೆ. "ಆತನ ಮುಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾಯಿತು." (ಎಫೆಸ 2:18)

ಈ ಲೋಕದವರೊಟ್ಟಿಗೆ ಐಕ್ಯವಾಗಿರುವುದಾದರೆ ದುಃಖ ಅಸಮದಾನ ಇದ್ದೇ ಇರುತ್ತದೆ. ಪರಿಶುದ್ಧಾತ್ಮನೊಟ್ಟಿಗೆ ಐಕ್ಯವಾಗಿರುವುದಾದರೆ ನೀನು ತಂದೆ ದೇವರಿಗೆ ಹತ್ತಿರವಾಗಲು ಸಾಧ್ಯವಾಗುತ್ತದೆ. ನಿನಗೆ ಇಹ–ಪರದಲ್ಲಿಯೂ ಸಂತೋಷವುಂಟಾಗುತ್ತದೆ. ಆಗ ನಿನ್ನನ್ನು ನೋಡುವ ದೇವದೂತರುಗಳು ಸಹ ಆಶ್ಚರ್ಯಪಡುತ್ತಾರೆ. 'ನಿನ್ನ ಹಾಗೆ ಯಾರೂ ಇಲ್ಲ' ಎಂದು. "ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವದೆಂಬದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟು ಮಾಡುವದು." (ಎಫೆಸ 1:14)

ನೀನು ದೇವರು ಸಂಪಾದಿಸಿದ ವ್ಯಕ್ತಿಯಾಗಿದ್ದೀಯಾ, ದುರಾತ್ಮನ ಅಧೀನದಲ್ಲಿದ್ದ ನಿನ್ನನ್ನು ನಮ್ಮ ಪ್ರಿಯ ರಕ್ಷಕನು ತನ್ನ ರಕ್ತವನ್ನು ಚೆಲ್ಲಿ ಕೊಂಡುಕೊಂಡನು. ಮತ್ತು ನಿನಗೆ ಈ ಲೋಕದಿಂದ ವಿಮೋಚನೆಯನ್ನು ಕೊಟ್ಟು ಪರಲೋಕದಲ್ಲಿ ಬಾಧ್ಯತೆಯನ್ನು ಕೊಡುವುದಕ್ಕಾಗಿ ನಿನಗೆ ತನ್ನ ಆತ್ಮನನ್ನು ಕಳುಹಿಸಿಕೊಟ್ಟಿದ್ದಾನೆ. ನೀನು ಈ ಲೋಕದಲ್ಲಿರುವುದನ್ನೆಲ್ಲಾ ಜಯಿಸಿ ಕರ್ತನು ಕೊಡುವ ನಿತ್ಯರಾಜ್ಯವನ್ನು ಪ್ರವೇಶಿಸುವುದಾದರೆ ಕರ್ತನ ಮಹಿಮೆಯು ಪ್ರಖ್ಯಾತಿಗೆ ಬರುತ್ತದೆ.

ನಿನ್ನ ಮುಖಾಂತರ ನಮ್ಮ ಕರ್ತನಿಗೆ ಮಹಿಮೆ ಉಂಟಾಗಬೇಕು ನೀನು ಪರಿಶುದ್ಧಾತ್ಮನ ಸಹಾಯದಿಂದ ಪ್ರಾರ್ಥನೆ ಮಾಡು. ನಿನ್ನ ಜ್ಞಾನದಿಂದ ಪ್ರಾರ್ಥನೆ ಮಾಡಿದ್ದು ಸಾಕು.

"ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆ" (1 ಕೊರಿ 6:19) ನೀನು ಆತ್ಮನಿಗೆ ಅನುಗುಣವಾಗಿ ನಡೆಯಬೇಕು ನಿನ್ನಲ್ಲಿ ಪವಿತ್ರಾತ್ಮನು ನೆಲೆಗೊಂಡಿದ್ದಾನೆ ಎಂದು ಮರೆಯಬಾರದು. ನೀನು ದಿನವೂ ಪರಿಶುದ್ಧಾತ್ಮನ ಸ್ವರಕ್ಕೆ ಕಿವಿಗೊಡು ನಿನ್ನನ್ನು ಆತನು ಪಾಪ ಮಾಡಲು ಬಿಡುವುದೇ ಇಲ್ಲ. ಮತ್ತು ನಿನ್ನ ನೆನಪಿರಲಿ

ನ್ಯಾಯವಿಚಾರಣೆಯ ದಿನದಂದು ನಮ್ಮ ತಂದೆಯು ನಿನ್ನಲ್ಲಿ ನೆಲೆಗೊಂಡಂತಹ ಪರಿಶುದ್ಧಾತ್ಮನ್ನು ಕರೆಯುತ್ತಾರೆ. "ಇದಲ್ಲದೆ ಆತ್ಮನು ಸಾಕ್ಷಿ ಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ" (1ಯೊಹಾನ 5:7) ಪರಿಶುದ್ಧಾತ್ಮನೂ ಸಹ ನಿನ್ನ ಬಗ್ಗೆ ಹೆಮ್ಮೆ ಪಟ್ಟುಕೊಂಡು ತಂದೆಗೆ ಹೇಳಬೇಕು, ತಂದೆಯೇ ಇವಳ/ನ/ನ್ನು ಸೇರಿಸಿಕೋ 'ಈ ವ್ಯಕ್ತಿಯ ಹಾಗೆ ಯಾರು ಇಲ್ಲ.' ಇವರು ನೀನು ಕೊಡುವ ನಿತ್ಯರಾಜ್ಯವನ್ನು ಹೊಂದಲು ಯೋಗ್ಯರಾಗಿದ್ದಾರೆ ಎಂದು.

ನಮ್ಮ ಪ್ರಿಯ ರಕ್ಷಕನಾದ ಯೇಸುಕ್ರಿಸ್ತನೂ ಮತ್ತು ಪವಿತ್ರಾತ್ಮನೂ ನಿನಗಾಗಿ ಪ್ರಯಾಸ ಪಡುತ್ತಿರುವುದು ಯಾಕೆಂದರೆ ನೀನು ತಂದೆಯೊಟ್ಟಿಗೆ ಒಂದಾಗ ಬೇಕೆಂತಲೇ. ನಮ್ಮ "ತ್ರೈಐಕ್ಯ ದೇವರ ಹಾಗೆ ಯಾರೂ ಇಲ್ಲ." ನಿನಗಾಗಿ ಅವರ ಪ್ರಯಾಸವು ವ್ಯರ್ಥವಾಗದಂತೆ ನಿನ್ನ ಜೀವನವನ್ನು ಕರ್ತನಲ್ಲಿ ಸಾರ್ಥಕಪಡಿಸಿಕೋ.

ತಂದೆ ದೇವರು ನಿನ್ನನ್ನು ನೋಡುವಾಗ ನೀನು ತಂದೇ ದೇವರಿಗೆ ಮೆಚ್ಚಿಕೆಯಾದ ವ್ಯಕ್ತಿಯಾಗಿರಲು ಪ್ರಯಾಸಪಡು.

**ಕರ್ತನು ನಿನ್ನನ್ನು ಆಶೀರ್ವದಿಸಲಿ.**

– – – – –